UNIVERSAL
LIBRARY
OU_200199
UNIVERSAL
LIBRARY

# ವೇಣೀ ಬಂಧನ.

ಶ. ಸಾ. ಅಮೀನಭಾವಿ.

# ವೇಣೀ ಬಂಧನ.

ಲೇಖಕ:—

ತಮ್ಮಾಜಿ ನಾರಾಯಣ ಅಮೀನಭಾವಿ,

ಅಸಿ ಮಾಸ್ತರ ಟ್ರೇ. ಕಾ. ಫಾರ ಮೆನ್. ಧಾರವಾಡ.

೧೯೨೧.

Price 6 As.

ಬೆಲೆ ೬ ಆಣೆ

ಈ ಪುಸ್ತಕವನ್ನು

ಶ್ರೀಯುತ ಯಶವಂತ ಭಾಸ್ಕರ ಜತಾರ ಇವರು ತಮ್ಮ

ಕರ್ನಾಟಕ ಪ್ರಿಂಟಿಂಗ ವರ್ಕ್ಸ, ಧಾರವಾಡ ಮುದ್ರಾಲಯದಲ್ಲಿ

ಮುದ್ರಿಸಿ ಪ್ರಸಿದ್ಧ ಮಾಡಿದರು.

# ಪ್ರಸ್ತಾವನೆ.

ಪ್ರಿಯ ಬಾಲವಾಚಕರೆ, ಇದೊಂದು ಸುಲಭವಾದ ಮನೋರಂಜಕ ಪುಸ್ತಕವು. ಸಂಸ್ಕೃತಭಾಷೆಯಲ್ಲಿ ವೇಣೀಸಂಹಾರವೆಂಬದೊಂದು ಸುರಸನಾಟಕವುಂಟೆಂಬದನ್ನು ನೀವು ಕೇಳಿರಬಹುದು; ಅದನ್ನು ಬಂಗಾಲಪ್ರಾಂತದ ಭಟ್ಟ ನಾರಾಯಣನೆಂಬ ಕವಿಯು ಇಂದಿಗೆ ಸುಮಾರು ೧೨೦೦ ವರ್ಷಗಳ ಪೂರ್ವದಲ್ಲಿ ಬರೆದಿರುವನು. ಮಹಾಭಾರತದ ಉದ್ಯೋಗ ಪರ್ವದಿಂದ ಗದಾಪರ್ವದವರೆಗಿನ ಕಥೆಯೇ ಈ ನಾಟಕದ ಮುಖ್ಯ ವಿಷಯವಾಗಿರುವದು ಅದರ ಆಧಾರದಿಂದ ಈ ಚಿಕ್ಕಪುಸ್ತಕವು ಬರೆಯಲ್ಪಟ್ಟಿರುವದು.

ಹಿಂದಕ್ಕೆ ಧಾರವಾಡ ಶಿಕ್ಷಕ ಶಿಕ್ಷಣಾಲಯದ ಕನ್ನಡ ಗುರುಗಳಾಗಿದ್ದ ಗುರುವರ್ಯ ಮುಳುಬಾಗಲ ಧೋಂಡೋಪಂತರು ಆ ನಾಟಕವನ್ನು ಸಮಗ್ರವಾಗಿ ಕನ್ನಡಕ್ಕೆ ಪರಿವರ್ತಿಸಿರಲು ಅದೇ ಕೆಲಸಕ್ಕೆ ನೀವೇಕೆ ಶ್ರಮಪಟ್ಟಿರೆಂದು ಕೇಳುತ್ತೀರಾ? ಪ್ರಿಯ ಬಾಲಕರೆ ಕೇಳಿರಿ. ನಮ್ಮ ಗುರುವರ್ಯರು ವೇಣೀಸಂಹಾರ ನಾಟಕವನ್ನು ತಮ್ಮ ವಿದ್ಯಾರ್ಥಿಗಳ ಸಲುವಾಗಿ ಬರೆದಿರುವರು. ನೀವು ಅದನ್ನು ಅನಾಯಾಸವಾಗಿ ಓದಿ ಸಾರಾಂಶವನ್ನು ಗ್ರಹಿಸಲಾರಿರಿ ಈ ಚಿಕ್ಕ ಪುಸ್ತಕವು ನಿಮ್ಮ ಸಲುವಾಗಿಯೇ ಬರೆಯಲ್ಪಟ್ಟಿರುವದು. ಆದಷ್ಟು ಮಟ್ಟಿಗೆ ಇದರ ಭಾಷೆಯು ಸುಲಭವಾಗುವಂತೆ ಮಾಡಲ್ಪಟ್ಟಿದೆ ಈ ಪುಸ್ತಕವನ್ನು ನೀವು ಅಲ್ಪಾವಕಾಶದಲ್ಲಿ ಓದಿ ಮುಗಿಸಬಹುದು. ಇದರಿಂದ ಸಾಧಾರಣವಾಗಿ ಇಡೀ ಮಹಾಭಾರತದ ಕಥೆಯು ನಿಮ್ಮ ಮನಸಿನಲ್ಲಿ ಬರುವದು, ಅದರೊಳಗಿನ ಧರ್ಮ, ಭೀಮ, ದ್ರೌಪದಿ. ದುರ್ಯೋಧನ, ಕರ್ಣ, ಅಶ್ವತ್ಥಾಮ ಇವರೇ ಮೊದಲಾದ ಮುಖ್ಯ ಮುಖ್ಯ ಪಾತ್ರಗಳ ಸ್ವಭಾವವು ಗೊತ್ತಾಗುವದು; ಮತ್ತು ಪರಸ್ತ್ರೀಯ ಮಾನಭಂಗವನ್ನು ಮಾಡಿದ ನೀಚರಿಗೆ ಏನು ಗತಿಯಾಗುವದೆಂಬದು ಚನ್ನಾಗಿ ತಿಳಿಯುವದು. ಈ ಪುಸ್ತಕವು ನಿಮಗೆ ಮೆಚ್ಚಿಗೆಯಾದರೆ, ಸಂಸ್ಕೃತಹಳೆಗನ್ನಡ ಭಾಷೆಗಳೊಳಗಿನ ಸುರಸವಾದ ಕಥೆಗಳನ್ನು ಇದೇ ರೀತಿಯಾಗಿ ಸುಲಭ ಭಾಷೆಯಿಂದ ಬರೆಯಲು ಯತ್ನಮಾಡುವೆನು. ಪರಮಾತ್ಮನು ನನ್ನ ಇಚ್ಛೆಯನ್ನು ಈಡೇರಿಸಲಿ.

ಮಕ್ಕಳೆ ಇನ್ನೊಂದು ಮಾತು ಹೇಳುವದುಳಿದಿದೆ. ಈಗ ಕೆಲವು ದಿವಸಗಳ ಕೆಳಗೆ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರ ಜಾಗೆಯಿಂದ ನಿವೃತ್ತರಾದ ಮೋಹರಬಾನರಾವಜೀರಾವ ಬಳವಂತ ಕರಂದೀಕರ ಈ ಮಹನೀಯರು ತಮ್ಮ ಅಮೂಲ್ಯ ವೇಳೆಯನ್ನು ವೆಚ್ಚಮಾಡಿ ಈ ಪುಸ್ತಕದ ಭಾಷೆಯು ಸುಲಭವಾಗುವಂತೆ ಮಾಡುವ ಬಗ್ಗೆಯೂ, ವಿಷಯದಲ್ಲಿ ಹಲಕೆಲವು ಹೆಚ್ಚುಕಡಿಮೆಗಳನ್ನು ಮಾಡುವ ವಿಷಯವಾಗಿಯೂ ಕೆಲವು ಉಪಯುಕ್ತ ಸೂಚನೆಗಳನ್ನು ಮಾಡಿದ ಕಾರಣ ನಾನು ಆ ಮಹನೀಯರಿಗೆ ಅತ್ಯಂತ ಋಣಿಯಾಗಿರುವೆನು

ಧಾರವಾಡ

ತಾ. ೯ನೇ ಮೇ ೧೯೧೩ T. N. Aminbhavi

# ೨ ನೆಯ ಆವೃತ್ತಿಯ ಪ್ರಸ್ತಾವನೆ.

ಬಾಲವಾಚಕರೆ, ನಿಮ್ಮ ವಾಚನಾಭಿರುಚಿಯನ್ನು ಕಂಡು ಈ ಚಿಕ್ಕ ಪುಸ್ತಕದ ೨ನೆಯ ಆವೃತ್ತಿಯನ್ನು ತೆಗೆಯುವ ಸುಯೋಗವು ಒದಗಿದ್ದಕ್ಕಾಗಿ ನನಗೆ ಅತ್ಯಂತ ಆನಂದವಾಗುತ್ತದೆ. ಈಗ ಇದನ್ನು ಮುದ್ರಿಸಲು ಸಹಾಯ ಮಾಡಿದ್ದಕ್ಕಾಗಿ ಶ್ರೀಯುತ ಜಠಾರ ಯಶವಂತರಾಯರಿಗೂ, ಕರ್ನಾಟಕ ವಾಙ್ಮಯ ಸೇವಾಸಂಘದ ಕಾರ್ಯದರ್ಶಿಗಳಾದ ಶ್ರೀ. ಬಾಳಾಜಿ ಕೃಷ್ಣ ಹಳಪೇಟಿ ಇವರಿಗೂ ನಾನು ತುಂಬಾ ಋಣಿಯಾಗಿದ್ದೇನೆ.

೨೫ ಎಪ್ರಿಲ ೧೯೨೧ ತ. ನಾ. ಅಮೀನಭಾವಿ

# ವೇಣೀಬಂಧನ.

## ನೆಯ ಪ್ರಕರಣ.

### ಘೋರವಾದ ಪ್ರತಿಜ್ಞೆ.

ಪಾಂಡವರು ತಮ್ಮ ಪ್ರತಿಜ್ಞೆಯ ಮೇರೆಗೆ ಹನ್ನೆರಡು ವರ್ಷ ವನವಾಸವನ್ನೂ ಒಂದು ವರ್ಷ ಅಜ್ಞಾತವಾಸವನ್ನೂ ಅನುಭವಿಸಿದ ಬಳಿಕ ಕೌರವರಿಗೆ ತಮ್ಮ ರಾಜ್ಯದಲ್ಲಿ ಸರಿಪಾಲು ಬೇಡಿದರು. ದುರ್ಯೋಧನನು ಅವರ ಮಾತಿಗೆ ಒಪ್ಪಿಕೊಳ್ಳಲಿಲ್ಲ. ಕಟ್ಟಕಡೆಗೆ ಅಜಾತಶತ್ರುವಾದ ಧರ್ಮರಾಜನು ಕೌರವರು ನಮಗೆ ಅಯ್ದು ಗ್ರಾಮಗಳನ್ನಾದರೂ ಕೊಟ್ಟರೆ, ನಾವು ಸಂತುಷ್ಟರಾಗುವೆವೆಂದು ಶ್ರೀಕೃಷ್ಣನಿಗೆ ತಿಳಿಯಪಡಿಸಿದನು. ದುಷ್ಟಶಾಸನ ಶಿಷ್ಟಪಾಲನ ಕರ್ತನೂ ಚಕ್ರಪಾಣಿಯೂ ಆದ ಶ್ರೀಕೃಷ್ಣನು, ಭರತ ಕುಲದ ಹಿತಕ್ಕೋಸ್ಕರವಾಗಿ ದುರ್ಯೋಧನನಿಗೆ ನಾಲ್ಕು ಸಾಮೋಪಚಾರದ ಮಾತುಗಳನ್ನು ಹೇಳಿ ಅವನನ್ನು ಧರ್ಮರಾಜನ ಕಟ್ಟಕಡೆಯ ಅಭಿಪ್ರಾಯಕ್ಕೆ ಒಡಂಬಡಿಸಬೇಕೆಂದು, ಸ್ವತಃ ದೂತವೃತ್ತಿಯನ್ನು ಸ್ವೀಕರಿಸಿ ನಿಯಮಿತ ಪರಿವಾರದೊಡನೆ ಕೌರವರ ಶಿಬಿರಕ್ಕೆ ಹೋದನು.

ಇತ್ತ ಭೀಮಸೇನನು ಸಹದೇವನ ಸಂಗಡ ಮಾತನಾಡುತ್ತ ಗ[illegible] ಮಂದಿರದ ಕಡೆಗೆ ಬರುತ್ತಿದ್ದನು. ಅಷ್ಟರಲ್ಲಿ ಯಾವನೋ ಒಬ್ಬ ಸ್ತುತಿಪಾಠಕನು— "ಪಾಂಡವರು ಶ್ರೀಕೃಷ್ಣನೊಡನೆ ಸುಖವಾಗಿ ಬಾಳಲಿ; ಕೌರವರು ಸ್ವಸ್ಥರಾಗಲಿ" ಎಂದು ನುಡಿದನು. ಈ ಶಬ್ದಗಳು ಭೀಮಸೇನನ ಕಿವಿಗೆ ಬೀಳಲು, ಅವನು ಆ ಮಂಗಲಪಾಠಕನ ಮೇಲೆ ಸಿಟ್ಟಾಗಿ— "ಎಲಾ ಸಹದೇವಾ, ನಾನು ಜೀವದಿಂದಿರಲು, ಆ ಧೃತರಾಷ್ಟ್ರನ ನೀಚ ಪೋರರಿಗೆ ಮಂಗಲವಾತವನ್ನು ಹೇಳುವವನು ಇದಾವನೋ! ಎನ್ನಲು, ಸಹದೇವನು— "ಅಣ್ಣಾ, ಹಾಗಲ್ಲ: ಅವನ ಮಾತಿನಲ್ಲಿ ಗೂಢಾರ್ಥವಿರುತ್ತದೆ. ಕೌರವರು, ಸ್ವಸ್ಥರಾಗಲಿ, ಎಂದರೆ ಸ್ವರ್ಗಸ್ಥರಾಗಲಿ ಎಂದು ಅವನ ಅಭಿಪ್ರಾಯವಿರುತ್ತದೆ. ಹೀಗೆಂದು ಸಮಾಧಾನವನ್ನು ಹೇಳಲು, ಅದಕ್ಕೆ ಭೀಮಸೇನನು— "ಛೀ! ಛೀ! ಹಾಗೆಂದಿಗೂ ಅಲ್ಲ ಕೌರವರು ನಿಮ್ಮ ಬಾಂಧವರಲ್ಲವೆ? ಅವರಿಗೆ ಅನಿಷ್ಟವನ್ನು ಚಿಂತಿಸುವದುಂಟೇ? ಅವರ ಕೂಡ ನೀವು ಹ್ಯಾಗಾದರೂ ಒಡಂಬಡಿಕೆಯನ್ನೇ ಮಾಡಿಕೊಳ್ಳತಕ್ಕದ್ದು! ಈ ವಿಷಯದಲ್ಲಿ ನಾನಂತೂ ನಿಮ್ಮಿಂದ ಬೇರೆಯಾಗಿದ್ದೇನೆ. ನನ್ನ ಮನಸ್ಸಿನಲ್ಲಿ ಕೌರವರ ವಿಷಯವಾಗಿ ಸ್ವಾಭಾವಿಕ ದ್ವೇಷವು ನೆಲೆಗೊಂಡಿರುವದು. ಧರ್ಮರಾಜನು ಅವರ ಕೂಡ ಒಪ್ಪಂದ ಮಾಡಿಕೊಳ್ಳುವನಂತೆ; ನೀವು ಮೂವರೂ ಅದಕ್ಕೆ ಸಮ್ಮತಿಸಿರುವಿರಂತೆ; ಅದರೆ

ನಾನು ಆ ಒಪ್ಪಂದಕ್ಕೆ ಎಷ್ಟು ಮಾತ್ರವೂ ಒಪ್ಪಿಕೊಳ್ಳುವದಿಲ್ಲ. ಇಷ್ಟೇ ಅಲ್ಲ, ನನ್ನ ಕೈಲಾದ ಮಟ್ಟಿಗೆ ಆ ಒಪ್ಪಂದವನ್ನು ಮುರಿಯಲಿಕ್ಕೆ ಪ್ರಯತ್ನ ಮಾಡುತ್ತೇನೆ.'' ಎಂದು ಅಂದನು. ಈ ಮಾತುಗಳನ್ನು ಕೇಳಿ ಸಹದೇವನು—" ಅಣ್ಣಾ, ನೀವು ಹೀಗೆ ಸಿಟ್ಟಾದರೆ ಧರ್ಮರಾಜನಿಗೆ ಖೇದವಾಗಲಿಕ್ಕಿಲ್ಲವೆ!' ಅಂದನು. ಅದಕ್ಕೆ ಭೀಮಸೇನನು— "ಏನಂದಿ! ಧರ್ಮರಾಜನಿಗೆ ಖೇದವಾಗುತ್ತದೆಯೆ! ಹಾಗಿದ್ದರೆ ನೆರೆದ ಸಭೆಯಲ್ಲಿ ದುಃಶಾಸನನು ಪಾಂಚಾಲಿಯ ತುರುಬು ಹಿಡಿದು ದರದರ ಎಳೆದು ತಂದು ತೀರ ಅಪಮಾನಾಸ್ಪದವಾದ ಕೆಲಸವನ್ನು ಮಾಡಿದಾಗ್ಯೂ ಇವನು ಸುಮ್ಮನೆ ಕೂಡುತ್ತಿದ್ದನೆ? ವಲ್ಕಲಗಳನ್ನುಟ್ಟುಕೊಂಡು ಕಾಡು ಜನರ ಸಹವಾಸದಲ್ಲಿ ಹನ್ನೆರಡು ವರ್ಷ ಕಾಲ ಕಳೆಯುತ್ತಿದ್ದನೆ! ಮತ್ತು ವಿರಾಟರಾಜನ ಅರಮನೆಯಲ್ಲಿ ಅತಿ ಕನಿಷ್ಠತರದ ಕೆಲಸಗಳನ್ನು ಮಾಡಲಿಕ್ಕೆ ಒಡಂಬಡುತ್ತಿದ್ದನೆ? ಇಲ್ಲ, ಸಹದೇವಾ, ಆ ಧರ್ಮರಾಜನ ಅಂತಃಕರಣದಲ್ಲಿ ಸಿಟ್ಟು, ಅಪಮಾನ, ಖೇದಗಳೆಂಬ ವಿಕಾರಗಳು ಇಲ್ಲವೇ ಇಲ್ಲ. ಏನು ಮಾಡತಕ್ಕದ್ದದೆ! ನಾನಂತೂ ಇನ್ನು ಮೇಲೆ ಅವನ ಹಿರಿಯತನವನ್ನು ಒತ್ತಟ್ಟಿಗೆ ಇಟ್ಟಿಟ್ಟು ಈ ಗದಾಪ್ರಹಾರದಿಂದ ಕೌರವ ಕುಲದ ಸಂಹಾರ ಮಾಡುವದನ್ನು ನಿಶ್ಚಯಿಸಿದ್ದೇನೆ.'' ಹೀಗೆಂದು ಮಾತನಾಡುತ್ತ ಮಾತನಾಡುತ್ತ ಸಹದೇವನೊಡನೆ ಪಾಂಚಾಲಿಯ ಮಂದಿರದ ಬಳಿಗೆ ಬಂದನು. ಆಗ ದ್ರೌಪದಿಯು ಮಂದಿರದಲ್ಲಿ ಇಲ್ಲವಾದ ಕಾರಣ ಅವಳ ದಾರಿ ನೋಡುತ್ತ ಆ ಉಭಯತರು ಅಲ್ಲಿಯೇ ಸ್ವಲ್ಪ ಹೊತ್ತು ಮಾತನಾಡುತ್ತ ಕುಳಿತುಕೊಂಡರು. ಆ ಕಾಲಕ್ಕೆ ಭೀಮಸೇನನು— "ತಮ್ಮಾ ಸಹದೇವಾ, ಶ್ರೀಕೃಷ್ಣನು ಕೌರವರಕೂಡ ಸಂಧಿಯನ್ನು ಮಾಡುವ ನಿಮಿತ್ತವಾಗಿ ಹೋಗಿರುವನಂತೆ, ಅವನೇತಕ್ಕೆ ಸಂಧಿಯನ್ನು ಮಾಡುವನು? ನೀನು ಬಲ್ಲೆಯಾ!'' ಎಂದು ಕೇಳಲು, ಸಹದೇವನು— "ಕೌರವರಿಂದ ನಮ್ಮ ನಿರ್ವಾಹಕ್ಕಾಗಿ ಐದು ಊರು ಗ್ರಾಮಗಳನ್ನು ಬೇಡಿಕೊಳ್ಳತಕ್ಕದ್ದು; ಹೆಚ್ಚಿನದೇನೂ ಇಲ್ಲ" ಎಂದು ಹೇಳಿದನು. ಈ ಮಾತು ಕೇಳಿ ಭೀಮಸೇನನಿಗೆ ಅತ್ಯಂತ ದುಃಖವಾಯಿತು. ಆಗ ಅವನು "ಅಯ್ಯೋ! ಸಹದೇವಾ, ಏನು ನಮ್ಮ ದುರ್ದೈವವು!! ಈ ಅಜಾತ ಶತ್ರುವಾದ ಧರ್ಮರಾಜನ ಅತ್ಯಂತ [illegible] ಎಷ್ಟು ನಷ್ಟವಾಗಿದ್ದೀತು! ಅದನ್ನೂ ಈತನು ಯಾವತ್ತು ರಾಜ್ಯಲಕ್ಷ್ಮಿಯ ಸಂಗಡ ಜೂಜಿನಲ್ಲಿ ಶತ್ರುಗಳಿಗೆ ಸೋತು ಬಿಟ್ಟಂತೆ ತೋರುತ್ತದೆ. ಇಲ್ಲದಿದ್ದರೆ, ಹೀಗೆ ನೀಚತ್ವಕ್ಕೆಯಿಂದ ಯಾಚನೆಯನ್ನು ಮಾಡಲಿಕ್ಕೆ ಸಿದ್ಧನಾಗುತ್ತಿದ್ದನೆ? ತಮ್ಮಾ, ಈ ಮಾತು ಕೇಳಿ ಸಂತಾಪದಿಂದ ನನ್ನ ಹೃದಯವು ತಲ್ಲಣಿಸುವದು ಅಣ್ಣನ ಸ್ವಭಾವಕ್ಕೆ ಏನು ಮಾಡಬೇಕೆಂಬದು ನನಗೆ ತಿಳಿಯದಂತಾಗಿದೆ.'' ಎಂದು ಸ್ವಲ್ಪ ಹೊತ್ತು ಸುಮ್ಮನೆ ಕುಳಿತು, ಆ ಬಳಿಕ, "ಅವನ ಸ್ವಭಾವವು ಹ್ಯಾಗೇ ಇರಲಿ, ಇನ್ನು ಮೇಲೆ ಅವನ ವಿಚಾರವು ನನಗೆ ಬೇಕಾಗಿಲ್ಲ. ನಾನು ಪೂರ್ವದಲ್ಲಿ ಮಾಡಿದ ಪ್ರತಿಜ್ಞೆಯನ್ನು ಕೊನೆಗಾಣಿಸುವದು ನಿಶ್ಚಯವು" ಎಂದು ಅಂದನು. ಈ ಪ್ರಕಾರ ಮಾತನಾಡುತ್ತಿರುವವರಲ್ಲಿ ದ್ರೌಪದಿಯು ತನ್ನ ದಾಸಿಯೊಡನೆ ಅಲ್ಲಿಗೆ ಬಂದಳು ಆ ಕಾಲಕ್ಕೆ ಅವಳ ಜೊಗಸೆ

ಗಣ್ಣುಗಳಿಂದ ನೀರು ಧಾರೆಗೊಂಡು ಸುರಿಯುತ್ತಿದ್ದವು. ಕುರು ಕುಲವನ್ನು ಸಂಹರಿಸಲಿಕ್ಕೆ ನೀಡಿದ ಕೃತಾಂತಹಸ್ತವೋ ಏನೋ ಅನ್ನುವಂತೆ ಅವಳ ಕಪ್ಪು ವರ್ಣದ ಕೇಶಪಾಶವು ಬೆನ್ನಮೇಲೆ ಬಿದ್ದಿತ್ತು. ದೇವಿಯೇ, ಯಾಕೆ ವ್ಯರ್ಥವಾಗಿ ದುಃಖಪಡುತ್ತೀ' ಯುವರಾಜ ಭೀಮಸೇನ ಮಹಾರಾಜರು ಸ್ವಲ್ಪ ದಿವಸಗಳಲ್ಲಿಯೇ ನಿನ್ನ ಈ ದುಃಖವನ್ನು ಹೋಗಲಾಡಿಸುವರು. ಎಂದು ದಾಸಿಯು ಅವಳನ್ನು ಪರಿಪರಿಯಿಂದ ಸಮಾಧಾನಪಡಿಸುತ್ತಿದ್ದಳು. ಅದಕ್ಕೆ ದ್ರೌಪದಿಯು - ಸಖಿಯೇ, ನೀನನ್ನುವದು ನಿಜವು; ಭೀಮಸೇನ ಮಹಾರಾಜರು ಆ ನೀಚರ ವಿಷಯವಾಗಿ ಹಗಲಿರಳು ಕಂಕರ ಹಲ್ಲು ತಿನ್ನುತ್ತಿರುವರು; ಅವರ ಮನಸ್ಸಿಗೆ ಬಂದರೆ ನನ್ನ ದುಃಖದ ಪ್ರತೀಕಾರವು ತಡವಿಲ್ಲದೆ ಆಗುವದು ಆದರೆ ಈ ಮಾತಿಗೆ ಧರ್ಮರಾಜ ಮಹಾರಾಜರು ಅನುಕೂಲರಾಗಬೇಕಲ್ಲ? ಎಂದು ಬಿಟ್ಟುಸಿರು ಬಿಟ್ಟು ನುಡಿದಳು. ಈ ಮೇರೆಗೆ ಮಾತನಾಡುತ್ತ ಅವರಿಬ್ಬರು ಭೀಮಸೇನನ ಸಮೀಪಕ್ಕೆ ಬಂದರು. ಆದರೆ ಭೀಮನು ಆಗ ಕ್ರೋಧಾಂಧನಾಗಿದ್ದದರಿಂದ ಅವನಿಗೆ ಅವಳು ಬಂದದ್ದು ಸಹ ಗೊತ್ತಾಗಲಿಲ್ಲ. ಅದನ್ನು ಕಂಡು ಅವಳು ತನ್ನ ದಾಸಿಯನ್ನು ಕುರಿತು– ಸಖಿಯೇ, ಈ ಕಾಲಕ್ಕೆ ಪ್ರಾಣನಾಥರು ನನಗೆ ಅನಾದರವನ್ನು ತೋರಿಸಿದಾಗ್ಯೂ ನನಗೆ ದುಃಖವಾಗುವದಿಲ್ಲ. ತಿರುಗಿ ಆನಂದವೇ ಆಗುತ್ತದೆ. ಯಾಕಂದರೆ ಇವರ ಸಿಟ್ಟಿನ ಸ್ವರೂಪವೇ ನನ್ನ ದುಃಖದ ಪ್ರತೀಕಾರದ ಆಶ್ವಾಸನವೆಂದು ನಾನು ತಿಳಿಯುತ್ತೇನೆ. ಈ ಕಾಲಕ್ಕೆ ಇವರು ಏನು ಮಾತನಾಡುತ್ತಾರೆಂಬುದನ್ನು ಇಲ್ಲಿಯೇ ಮರೆಯಾಗಿ ನಿಂತು ಕೇಳೋಣ ಎಂದು ದಾಸಿಯೂ ತಾನೂ ಒತ್ತಟ್ಟಿಗೆ ಸರಿದು ನಿಂತುಕೊಂಡರು. ಇತ್ತ ಭೀಮಸೇನನು ಹುಬ್ಬು ಗಂಟಿಕ್ಕಿ ಹಲ್ಲು ಕಡಿಯುತ್ತ ಒಳ್ಳೇ ಕ್ರೋಧಾವೇಶದಿಂದ ಸಹದೇವನಿಗೆ, ಕೇಳು: ಆ ಧರ್ಮರಾಜನು ಬೇಕಾದ ಹಾಗೆ ಸಂಧಿಯನ್ನು ಮಾಡಿಕೊಳ್ಳಲಿ; ನಾನು ಈ ನನ್ನ ಗದೆಯ ಹೊಡತದಿಂದ ಯಾವತ್ತು ಕುರುಕುಲವನ್ನು ಸಂಹಾರಮಾಡಿ ಬಿಡುವೆನು; ಎಂದು ಕೂಗಿ ಹೇಳುತ್ತಿರುವಾಗ ಕುತ್ತಿಗೆಯ ಶಿರಗಳು ಉಬ್ಬಿ ಹೆಚ್ಚು ಮಾತಾಡಲಾರದೆ ಸುಮ್ಮನಾದನು. ಈ ಮಾತನ್ನು ಕೇಳಿ ದ್ರೌಪದಿಗೆ ಅತಿಹರ್ಷವಾಯಿತು, ಸ್ವಲ್ಪ ಹೊತ್ತಿನ ಮೇಲೆ ಭೀಮಸೇನನು ಪುನಃ— ತಮ್ಮಾ ಸಹದೇವಾ, ಹಿಂದಕ್ಕೆ ನಾವೆಲ್ಲರೂ ವನವಾಸಕ್ಕೆ ಹೋಗುವಾಗ್ಗೆ ಯಾವತ್ತು ಕೌರವರ ಸಂಹಾರವನ್ನು ಮಾಡುವ ಬಗ್ಗೆ ಪ್ರತಿಜ್ಞೆಯನ್ನು ಮಾಡಿದ್ದೆವು. ನೆನಪುಂಟೋ! ಈ ಕಾಲಕ್ಕೆ ಜ್ಞಾತಿಗಳ ಕುಲಕ್ಷಯವಾಗುವದೆಂಬ ಹಾಳು ಹೆದರಿಕೆಯಿಂದಲೂ, ಲೋಕಲಜ್ಜೆಯಿಂದಲೂ ಆ ಪ್ರತಿಜ್ಞೆಯನ್ನು ಮರೆತು ಕಿರುಕರ ಹಾಗೆ ಅತಿ ದೈನ್ಯದಿಂದ ಆ ನೀಚರ ಬಳಿಯಲ್ಲಿಯೇ ಐದು ಗ್ರಾಮಗಳನ್ನು ಬೇಡುವದು ಎಂಥ ಹೇಡಿತನವು! ಎಲಾ, ನಿಮಗೆ ನಿಮ್ಮ ವೈರಿಗಳ ಕೂಡ ಯುದ್ಧಮಾಡಲಿಕ್ಕೆ ಜನರಲ್ಲಿ ನಾಚಿಕೆ ಬರುತ್ತದೆಯೋ? ಮೂರ್ಖಶಿರೋಮಣಿಗಳೇ, ನಿಮ್ಮ ಹೆಂಡತಿಯ ತುರುಬು ಹಿಡಿದು ನೆರೆದ ಸಭೆಯಲ್ಲಿ ಅಪಮಾನ ಮಾಡಿದ್ದರ ನಾಚಿಕೆಯು ನಿಮಗೆ ಎಳ್ಳಷ್ಟಾದರೂ ಇಲ್ಲವಾ' ಎಂದು ಒಳ್ಳೇ ಆವೇಶದಿಂದ ಮಾತಾಡುತ್ತಿರಲು, ದ್ರೌಪದಿಯು ಈ ಭಾಷಣಗಳನು

ಕೇಳಿ, ಅತ್ಯಾನಂದದಿಂದ ಭೀಮಸೇನನ ಹತ್ತರ ಬಂದು, ಸೈ! ಸೈ! ಪ್ರಾಣನಾಥರೇ, ನೀವ್ರೊಬ್ಬರೇ ಆ ಅಪಮಾನವನ್ನು ನೆನಪಿನಲ್ಲಿಟ್ಟಿರುವಿರಿ ಉಳಿದವರಾರೂ ಅದನ್ನು ಮನಸ್ಸಿನಲ್ಲಿ ಸಹ ತರುವದಿಲ್ಲ. ತಮ್ಮಿಂದಲೇ ನನ್ನ ದುಃಖದ ಪ್ರತೀಕಾರವಾದೀತೆಂದು ನಾನುನಂಬಿದ್ದೇನೆ. ಪ್ರಾಣನಾಥರೆ, ಬಹು ದಿವಸದಿಂದ ಈ ದಾಸಿಯು ಮನಸಿನಲ್ಲಿದ್ದ ಅರ್ಥವನ್ನು ಕೊನೆಗಾಣಿಸಬೇಕೆಂದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಎಂದು ವಿನಯದಿಂದ ಬಿನ್ನವಿಸಿದಳು. ಆಗ ಭೀಮಸೇನನು ದ್ರೌಪದಿಯನ್ನು ಪ್ರೇಮಪೂರ್ಣ ದೃಷ್ಟಿಯಿಂದ ನೋಡಿ – ಪ್ರಿಯೆ, ನಾನು ಕ್ರೋಧಾಂಧನಾದದ್ದರಿಂದ ನಿನ್ನನ್ನು ನೋಡಲಿಲ್ಲ. ಅದಕ್ಕಾಗಿ ನೀನು ನನ್ನ ಮೇಲೆ ಸಿಟ್ಟಾಗದೆ ನನ್ನನ್ನು ಕ್ಷಮಿಸು. ಅಂದನು. ಅದಕ್ಕೆ ದ್ರೌಪದಿಯು—ಪ್ರಾಣನಾಥರೆ, ನೀವು ಸುಮ್ಮನೆ ಕುಳಿತಾಗ ನನ್ನ ಅನಾದರವಾಗಿದ್ದರೆ ಮಾತ್ರ ನಾನು ಸಿಟ್ಟಾಗುತ್ತಿದ್ದೆನು. ಸಿಟ್ಟಿನಿಂದ ಸಂತಪ್ತರಾದ ನಿಮ್ಮನ್ನು ಕಂಡು, ನನ್ನ ಮನಸ್ಸಿಗೆ ಸಂತೋಷವೇ ಆಗುತ್ತದೆ. ಎಂದು ಅಂದಳು. ಆ ಬಳಿಕ ಭೀಮಸೇನನು ಅವಳ ಕೈ ಹಿಡಿದು ತನ್ನ ಹತ್ತರ ಕುಳ್ಳಿರಿಸಿಕೊಂಡು ಅವಳ ಬಾಡಿದ ಮುಖಕಮಲವನ್ನು ನಿರೀಕ್ಷಿಸಿ—ಪ್ರಿಯೆ, ನಿನ್ನ ಸುಂದರವಾದ ಮುಖವು ಇಷ್ಟೇಕೆ ಬಾಡಿರುವದು! ಮನಸು ಅಸಮಸವಾಗಲು ಕಾರಣವೇನು! ಓಹೋ! ಆ ಅಸ್ವಸ್ಥತೆಯನ್ನು ನೀನು ಬಾಯಿಬಿಚ್ಚಿ ಹೇಳುವ ಕಾರಣವೇ ಇಲ್ಲ. ಈ ನಿನ್ನ ಬಿಚ್ಚಿದ ಕೇಶಪಾಶಗಳೇ ಸ್ಪಷ್ಟವಾಗಿ ಹೇಳುತ್ತಿರುವವು ಅಯ್ಯೋ!! ಮಹಾ ಪರಾಕ್ರಮಿಗಳಾದ ಅಯ್ದುಮಂದಿ ಪಾಂಡವರು ಜೀವದಿಂದಿರಲು, ಪಾಂಚಾಲ ರಾಜಪುತ್ರಿಯು ಈ ಪಾಡನ್ನು ಅನುಭವಿಸಬೇಕೇ? ಪ್ರಿಯೆ, ನನ್ನ ಮೇಲೆ ನೀನು ನಿನ್ನ ಮನಸಿನ ದುಗುಡವನ್ನು ... ಸಮಾಧಾನದಿಂದ ... ಸ್ವಲ್ಪ ದಿವಸಗಳಲ್ಲಿ ನಿನ್ನ ಮನಸಿನಲ್ಲಿದ್ದಂತೆ ಆಗುವದು, ಎಂದು ಹೇಳಿದನು. ಆಗ ದ್ರೌಪದಿಯ ದಾಸಿಯು ಮುಂದೆ ಬಂದು—ಮಹಾರಾಜರೆ, ಇಂದು ದೇವಿಯವರ ಮನಸಿಗೆ ವಿಶೇಷ ದುಃಖವಾಗಲಿಕ್ಕೆ ಮುಖ್ಯವಾದ ಸಂಗತಿಯ ... ವರ್ತಿಸಿತು ಅದು ಯಾವದೆಂದರೆ —ದೇವಿಯವರು ಸುಭದ್ರಾ ಮೊದಲಾದ ಸವತಿಯರನ್ನು ಕೂಡಿಕೊಂಡು, ಅಕ್ಷಯವಾದ ಗಾಂಧಾರಿಯ ದರ್ಶನಕ್ಕೆಂದು ಹೋಗಿದ್ದರು. ಅಲ್ಲಿಂದ ತಿರುಗಿ ಬರುವಾಗ ದುರ್ಯೋಧನನ ಪಟ್ಟದರಾಣಿಯಾದ ಭಾನುಮತಿಯು ಸೊಕ್ಕಿನಿಂದ ದೇವಿಯವರನ್ನು ಕಂಡು, ಏನೇ ದ್ರೌಪದಿ, ನಿನ್ನ ಗಂಡಂದಿರು ಅಯ್ದು ಗ್ರಾಮಗಳನ್ನು ತೆಗೆದುಕೊಂಡು ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾರಂತಲ್ಲ! ನೀನು ಇನ್ನೂ ಯಾಕೆ ಹೆಳಲು ಹಾಕಿಕೊಂಡಿಲ್ಲ! ಎಂದು ಚುಚ್ಚಿ ಮಾತಾಡಿದಳು. ಆ ಮಾತುಗಳನ್ನು ಕೇಳಿ ದೇವಿಯವರಿಗೆ ಬಹಳ ಅಸಮಾಧಾನವಾಯಿತು ಆದರೂ ಅವರು ತುಟಿಬಿಚ್ಚಿ ಎರಡು ಮಾಡಲಿಲ್ಲ ನಾನು ಮಾತ್ರ ಅವಳ ಬಿರುನುಡಿಯನ್ನು ಸಹಿಸದೆ ಕೂಡಲೆ ಅವಳ ಮಾತಿಗೆ ಪ್ರತ್ಯುತ್ತರವಾಗಿ,— ಭಾನುಮತಿಯಮ್ಮನವರೆ, ನಿಮ್ಮ ಹೆಳಲು ಬಿಚ್ಚಿದ ಹೊರತು ತಮ್ಮ ಹೆಳಲು ಹಾಕಿಕೊಳ್ಳಲಿಕ್ಕಿಲ್ಲೆಂದು ನಮ್ಮ ದೇವಿಯವರು ಪ್ರತಿಜ್ಞೆಯನ್ನು ಮಾಡಿರುವರು! ಕಂಡಿರಾ!! ಎಂದು ಹೇಳಿದೆನು. ದಾಸಿಯು ಈ ಸಮಯೋಚಿತವಾದ

ಉತ್ತರವನ್ನು ಕೇಳಿ ಭೀಮಸೇನನಿಗೆ ಬಹಳ ಸಂತೋಷವಾಯಿತು. ಕೂಡಲೆ ಅವನು ತನ್ನ ಮೈಮೇಲಿನದೊಂದು ಆಭರಣವನ್ನು ತೆಗೆದು, ಆ ದಾಸಿಗೆ ಉಚಿತವಾಗಿ ಕೊಟ್ಟು, ಶಾಬಾಸ, ಮಗಳೇ ಶಾಬಾಸ; ಬಹಳ ಚೆನ್ನಾಗಿ ಮಾತಾಡಿದೆ ಎಂದನು. ಆದರೆ ಭಾನುಮತಿಯು ಆಡಿದ ಮಾತಿಗೆ ಅವನು ಕೋಪದಿಂದ ಕಿಡಿಕಿಡಿಯಾಗಿ ಹುಬ್ಬು ಗಂಟಿಕ್ಕಿ ಎದ್ದು ನಿಂತು ಕೈಯೊಳಗಿನ ಗದೆಯನ್ನು ಗರಗರನೆ ತಿರುವುತ್ತ ದ್ರೌಪದಿಯ ಕಡೆಗೆ ದೃಷ್ಟಿಯನ್ನಿಟ್ಟು,—ಎಲೈ ಪಾಂಚಾಲ ರಾಜಪುತ್ರಿಯಾದ ದ್ರೌಪದಿಯೇ, ಸಮಾಧಾನ ತಾಳು; ಸಮಾಧಾನ ತಾಳು. ಇನ್ನು ಸ್ವಲ್ಪ ದಿನಸಗಳಲ್ಲಿಯೇ ನಾನು ಈ ನನ್ನ ಪ್ರಚಂಡವಾದ ಗದೆಯ ಪೆಟ್ಟಿನಿಂದ ಯಾವತ್ತು ಕುರುಕುಲವನ್ನು ಸಂಹಾರ ಮಾಡುವೆನು; ಆ ನೀಚನಾದ ದುಃಶಾಸನನ ಎದೆಯನ್ನು ಸೀಳಿ, ಬಿಸಿ ಬಿಸಿ ರಕ್ತವನ್ನು ಕುಡಿದು ನನ್ನ ಕೋಪಾನಲವನ್ನು ಶಾಂತಗೊಳಿಸುವೆನು. ಮತ್ತು ಆ ಅಧಮಾಧಮನಾದ ದುರ್ಯೋಧನನ ತೊಡೆಗಳನ್ನು ಮುರಿದು ಪುಡಿ ಪುಡಿ ಮಾಡಿ ಚಲ್ಲುವೆನು. ಮತ್ತು ಅವರೆಲ್ಲರ ರಕ್ತದಿಂದ ನಿನ್ನನ್ನು ಎರೆದು ಎಲವುಗಳಿಂದ ಹಿಕ್ಕಿ ರಕ್ತಮಯವಾದ ನನ್ನ ಕೈಗಳಿಂದಲೇ ಈ ನಿನ್ನ ಬಿಚ್ಚಿದ ಹೆರಳನ್ನು ಹಾಕುವೆನು. ಇದೇ ನನ್ನ ಪ್ರತಿಜ್ಞೆಯು. ಇದನ್ನು ನಾನು ಮೊದಲೇ ಮಾಡಿರುವೆನು. ಈಗ ಇದನ್ನು ನಿಶ್ಚಯವಾಗಿ ಕೊನೆಗಾಣಿಸುವೆನು. ಎಂದು ಸಾರಿ ಸಾರಿ ನುಡಿದನು.

---

## ೨ನೆಯ ಪ್ರಕರಣ

### ವಿಲಾಪ

ಹಿಂದಿನ ಪ್ರಕರಣದ ಆರಂಭದಲ್ಲಿ ಶ್ರೀಕೃಷ್ಣನು ಪಾಂಡವರ ಪಕ್ಷದಿಂದ ಕೌರವರ ಕೂಡ ಸಂಧಿಯನ್ನು ಮಾಡುವ ಉದ್ದೇಶದಿಂದ ಹೋದ ಸಂಗತಿಯನ್ನು ಹೇಳಿದೆಯಷ್ಟೆ. ಆ ಪ್ರಕಾರ ಅವನು ಕೌರವರ ಸಭೆಗೆ ಹೋಗಿ ಸಭೆಯಲ್ಲಿ ನಿಂತು ದುರ್ಯೋಧನನಿಗೆ ಪಾಂಡವರ ಅಭಿಪ್ರಾಯವನ್ನು ತಿಳಿಯಪಡಿಸಿದನು. ದುರ್ಯೋಧನನು ತನ್ನ ಹಟವನ್ನು ಬಿಡುವಂತೆ ಕಾಣಲಿಲ್ಲ. ಆಗ ಶ್ರೀಕೃಷ್ಣನು ಕಟ್ಟಕಡೆಗೆ ಐದು ಗ್ರಾಮಗಳನ್ನಾದರೂ ಕೊಟ್ಟರೆ ಪಾಂಡವರು ಸಂತುಷ್ಟರಾಗುವರೆಂಬ ಮಾತನ್ನು ಹೇಳಿದನು. ಈ ಮಾತಿನಿಂದ ದುರ್ಯೋಧನನು, ಪಾಂಡವರು ನಮಗೆ ಹೆದರಿದರೆಂದು ತಿಳಿಕೊಂಡು ಯುದ್ಧ ಮಾಡಿದ ಹೊರತು ತೀಕ್ಷ್ಣವಾದ ಸೂಜಿಯ ಅಗ್ರವನ್ನು ಊರುವಷ್ಟು ಭೂಮಿಯನ್ನು ಸಹ ನಾನು ಪಾಂಡವರಿಗೆ ಕೊಡುವದಿಲ್ಲೆಂದು ಖಂಡಿತವಾಗಿ ಹೇಳಿದನು. ಮತ್ತು ಈ ಕೃಷ್ಣನೇ ಅವರಿಗೆ ಆಲೋಚನೆಯನ್ನು ಹೇಳುವವನು, ಇವನನ್ನು ಇಲ್ಲಿಯೇ ಸೆರೆಯಲ್ಲಿ ಹಾಕಿ ಬಿಟ್ಟರಾಯಿತು. ಎಂದು ಗುಪ್ತಾಲೋಚನೆಗಳನ್ನು ಮಾಡತೊಡಗಿದನು. ದುರ್ಯೋಧನನು ಎಂಥ ಮೂರ್ಖನು! ಬ್ರಹ್ಮಸನತ್ಕುಮಾರ ಮೊದಲಾದ ಸುರಶ್ರೇಷ್ಠರಿಗೂ ಮತಿಗೆ ಸಿಗದ

ಲಾದ ಬ್ರಹ್ಮರ್ಷಿಗಳಿಗೂ ಜನಕನೇ ಮೊದಲಾದ ರಾಜರ್ಷಿಗಳಿಗೂ ಯಾವಾತನ ಮಹಿಮೆಯು ಪೂರ್ಣವಾಗಿ ತಿಳಿಯಲಿಲ್ಲವೋ, ಆ ಶ್ರೀಕೃಷ್ಣನನ್ನು ಸೆರೆಯಲ್ಲಿ ಹಾಕುವದುಂಟೆ? ಮತ್ತು ಅವನು ಯಾರ ಕೈಯಲ್ಲಾದರೂ ಸೆರೆ ಸಿಕ್ಕುವನೆ? ಅವನು ಸರ್ವಜ್ಞ ಮೂರ್ತಿಯು; ದುರ್ಯೋಧನನ ಕಪಟ ತಂತ್ರಗಳನ್ನು ಕೂಡಲೆ ಅರಿತು, ಆ ಸಭೆಯಲ್ಲಿ ತನ್ನ ಭಯಂಕರವಾದ ವಿರಾಟಸ್ವರೂಪವನ್ನು ಒಮ್ಮಿಂದೊಮ್ಮೆ ಪ್ರಕಟಿಸಿದನು. ಅದರಿಂದ ಅಲ್ಲಿ ನೆರೆದ ಎಷ್ಟೋ ಜನರು ಮೂರ್ಛಿತರಾದರು. ಕೂಡಲೇ ಶ್ರೀಕೃಷ್ಣನು ಅಲ್ಲಿಂದಹೊರಟು ಧರ್ಮರಾಜನ ಬಳಿಗೆ ಬಂದು ಎಲ್ಲ ವೃತ್ತಾಂತವನ್ನು ಹೇಳಿದನು. ಧರ್ಮರಾಜನು ಶ್ರೀ ಕೃಷ್ಣನ ಅನುಮತಿಯನ್ನು ಪಡೆದು ಎಲ್ಲ ತಮ್ಮಂದಿರನ್ನೂ ಅತಿರಥ ಮಹಾರಥರನ್ನೂ ಕರೆಯಿಸಿ ಯುದ್ಧದ ಸಿದ್ಧತೆಯನ್ನು ಮಾಡತೊಡಗಿದನು.

ದ್ರುಪದ, ವಿರಾಟ, ಧೃಷ್ಟದ್ಯುಮ್ನ, ಸಹದೇವ ಇವರೇ ಮೊದಲಾದ ಪಾಂಡವರ ಕಡೆಯ ಭಟರೂ ಭೀಷ್ಮ, ದ್ರೋಣ, ಕೃಪ, ಕರ್ಣ, ಶಲ್ಯ ಮೊದಲಾದ ಕೌರವರ ಕಡೆಯ ಭಟರೂ ತಮ್ಮ ತಮ್ಮ ಪ್ರಚಂಡ ಸೈನ್ಯದೊಂದಿಗೆ ರಣಭೂಮಿಯಲ್ಲಿ ಸಜ್ಜಾಗಿ ನಿಂತುಕೊಂಡರು. ಪಾಂಡವರ ಏಳು ಅಕ್ಷೋಹಿಣೀ ಸೈನ್ಯವೂ ಕೌರವರ ಹನ್ನೊಂದು ಅಕ್ಷೋಹಿಣೀ ಸೈನ್ಯವೂ ನಿಂತುಕೊಂಡವು. ರಣವಾದ್ಯಗಳು ಧಳಂ ಧಳಂ ಎಂದು ಪ್ರಳಯಕಾಲದ ಮೇಘಗರ್ಜನೆಯಂತೆ ಶಬ್ದ ಮಾಡಹತ್ತಿದವು. ಅಖಿಳ ವೀರರು ತಮ್ಮ ಶಸ್ತ್ರಾಸ್ತ್ರಗಳನ್ನು ಹೊಸದಾಗಿ ಸಾಣೇ ಹಿಡಿಸಿದ್ದರಾದ ಕಾರಣ ಸೂರ್ಯನ ಪ್ರಕಾಶದಿಂದ ಅವು ಲಕಲಕ ಹೊಳೆಯುತ್ತಿದ್ದವು. ಸ್ವಲ್ಪ ಹೊತ್ತಿನಲ್ಲಿ ಉಭಯ ಸೈನಿಕರು ಒಬ್ಬೇ ಪರಾಕ್ರಮದಿಂದ ಹೋರಾಡಹತ್ತಿದರು. ಕೌರವರ ಸೈನ್ಯಕ್ಕೆ ಕುರುಕುಲ ಪಿತಾಮಹನಾದ ಭೀಷ್ಮನು ಸೇನಾಪತಿಯಾಗಿದ್ದನು. ಅವನು ಶತ್ರುಗಳ ಸಂಗಡ ಹತ್ತು ದಿವಸಗಳ ವರೆಗೆ ಜೀವದ ಹಂಗು ದೊರೆದು ಧರ್ಮಯುದ್ಧವನ್ನು ಮಾಡಿ ಶರಪಂಜರದ ಮೇಲೆ ಮಲಗಿದನು. ಉಭಯ ಪಕ್ಷದ ಸೈನ್ಯದಲ್ಲಿ ಎಷ್ಟೋ ದಂಡಾಳುಗಳು ವೀರಸ್ವರ್ಗವನ್ನು ಪಡೆದರು. ಭೀಷ್ಮನ ತರುವಾಯ ಕುರುಸೈನ್ಯಕ್ಕೆ ವೀರಾಗ್ರಣಿಗಳೂ, ಶಸ್ತ್ರಾಚಾರ್ಯರೂ ಆದ ದ್ರೋಣಾಚಾರ್ಯರು ಸೇನಾಪತಿಯಾದರು. ಯುದ್ಧವು ಯಥಾಪ್ರಕಾರವಾಗಿ ನಡೆದಿತ್ತು. ಆ ಪ್ರಸಂಗದಲ್ಲಿ ದ್ರೋಣಾಚಾರ್ಯರೂ, ಕರ್ಣ, ಜಯದ್ರಥ ಮೊದಲಾದ ಮಹಾವೀರರೂ ಕೂಡಿ ಪಾಂಡವರ ಕಡೆಯ ಅಭಿಮನ್ಯುವೆಂಬ ಬಾಲವೀರನನ್ನು ಚಕ್ರವ್ಯೂಹದಲ್ಲಿ ಅನ್ಯಾಯದಿಂದ ಹಿಡಿದು ಕೊಂದರು. ಇದರಿಂದ ಪಾಂಡವರ ಸೈನ್ಯದಲ್ಲಿ ನಾಲ್ಕೂ ಕಡೆಗೆ ಹಾಹಾಕಾರವೆದ್ದಿತು. ಕೌರವರ ದಂಡಿನಲ್ಲಿ ಆನಂದೋತ್ಸವಗಳು ಪ್ರಾರಂಭವಾದವು. ದುರ್ಯೋಧನನಿಗೂ ಬಹಳ ಆನಂದವಾಯಿತು. ಆ ಆನಂದದ ಭರದಲ್ಲಿ ಅವನು ಕೆಲಹೊತ್ತು ಯುದ್ಧವನ್ನು ಮರೆತು, ಭಾನುಮತಿಯೊಡನೆ ವಿಲಾಸ ಸುಖವನ್ನು ಅನುಭವಿಸಬೇಕೆಂದು ಆಲೋಚಿಸಿ, ಅವಳು ಇದ್ದಿರುವಳೊ,

ನೋಡಿಕೊಂಡು ಬಾ, ಎಂದು ಒಬ್ಬ ಸೇವಕನನ್ನು ಕಳುಹಿದನು. ಆ ಸೇವಕನು ಅಂತಃಪುರವನ್ನು ಬಲ್ಲವನಾದ್ದರಿಂದ ಭಾನುಮತಿಯು ಉದ್ಯಾನದಲ್ಲಿ ಮಹಾರಾಜರಿಗೆ ಜಯವಾಗಲೆಂದು ದೇವರನ್ನು ಆರಾಧಿಸುತ್ತಿರುವಳೆಂಬ ಸುದ್ದಿಯನ್ನು ತಂದು ಹೇಳಿದನು. ತರುವಾಯ ದುರ್ಯೋಧನನು ಅಲ್ಲಿಗೆ ಹೊರಟು ನಡೆದನು.

ಇತ್ತ ಭಾನುಮತಿಯು ತನ್ನ ಗೆಳತಿಯ ಮುಂದೆ— "ಸಖಿಯೆ, ಏನುಹೇಳಲಿ? ನಾನು ಪ್ರಮದವನದಲ್ಲಿ ಒಬ್ಬಳೇ ಕುಳಿತ ಸಮಯದಲ್ಲಿ ನಕುಲನು ನೂರು ಸರ್ಪಗಳನ್ನು ತುಂಡಿಸಿ ಚಲ್ಲಿ ನನ್ನ ಬಳಿಗೆ ಬಂದನು." ಎಂದು ರಾತ್ರಿಯಲ್ಲಿ ತನಗೆ ಬಿದ್ದ ಒಂದು ಕನಸನ್ನು ಹೇಳುತ್ತಿದ್ದಳು. ಅಷ್ಟರಲ್ಲಿ ದುರ್ಯೋಧನನು ಅಲ್ಲಿಗೆ ಬಂದು, ಭಾನುಮತಿಯು ಏನು ಮಾತನಾಡುತ್ತಿರುವಳೆಂಬದನ್ನು ಮರೆಗೆ ನಿಂತು ಕೇಳಹತ್ತಿದನು. ಆಗ ಭಾನುಮತಿಯು ಸಖಿಯು— ಗೆಳತೀ, ಮುಂದೇನಾಯಿತು? ಎಂದು ಕೇಳಿದಳು. ಅದಕ್ಕೆ ಭಾನುಮತಿಯು— ಸಖಿಯೇ, ಅವನ ಸುಂದರರೂಪವನ್ನು ಕಂಡು, ನನ್ನ ಮನಸ್ಸು ಕಕ್ಕಾವಿಕ್ಕಿಯಾಯಿತು. ಕೂಡಲೆ ನಾನು ಅಲ್ಲಿಂದ ಎದ್ದು, ಲತಾಮಂಟಪದಲ್ಲಿ ಕುಳಿತುಕೊಂಡೆನು. ಆದರೆ ಆ ನಕುಲನು ನನ್ನ ಬೆನ್ನುಹತ್ತಿಯೇ ಬಂದು ಮೈಮುಟ್ಟಿ ಸೆರಗು ಎಳೆದು ಕೆಲವು ಅಲ್ಲದ ಚೇಷ್ಟೆಗಳನ್ನು ಮಾಡಿದನು. ಎಂದು ಹೇಳಿದಳು ಈ ಮಾತುಗಳನ್ನು ಕೇಳಿ ದುರ್ಯೋಧನನ ಮನಸಿನಲ್ಲಿ ಮಾದ್ರೀಸುತನಾದ ನಕುಲನ ವಿಷಯವಾಗಿ ವಿಕಲ್ಪವು ಉತ್ಪನ್ನವಾಯಿತು ಪ್ರಿಯ ವಾಚಕರೇ, ಸಂಶಯವು ಬಹು ಕೆಡಕು; ಅದರಿಂದ ಮನುಷ್ಯನ ಅವಸ್ಥೆಯು ಹ್ಯಾಗಾಗುತ್ತದೆ! ನೋಡಿರಿ. ಕೂಡಲೇ ದುರ್ಯೋಧನನು ತನ್ನ ಖಡ್ಗಕ್ಕೆ ಕೈಹಾಕಿ, ಒಂದೇ ಹೊಡತದಿಂದ ನಕುಲನ ಚೇಷ್ಟೆಗಳಿಗೆ ಆಸ್ಪದಕೊಟ್ಟ ಈ ಪಾಪಿಷ್ಠಳನ್ನು ಈ ಲೋಕದಲ್ಲಿ ಇಲ್ಲದಂತೆ ಮಾಡಿ ಆ ಬಳಿಕ ಆ ಮಾದ್ರೀಸುತನ ಯೋಗ್ಯ ಸಮಾಚಾರವನ್ನು ತಕ್ಕೊಳ್ಳುತ್ತೇನೆಂದು ಖಡ್ಗವನ್ನು ಒರೆಯಿಂದ ಹಿರಿಯುತ್ತಿದ್ದನು; ಆಗ ಗೆಳತಿಯು— ಒಳ್ಳೇ ಆಶ್ಚರ್ಯದ ಮುದ್ರೆಯಿಂದ ಮುಂದೇನಾಯಿತು? ಎಂದು ಕೇಳಿದಳು. ಅದಕ್ಕೆ ಭಾನುಮತಿಯು— ಸಖಿಯೆ, ಆ ಬಳಿಕ ನಕುಲನು ಒಂದು ಗುದ್ದಿನಲ್ಲಿ ಸೇರಿಕೊಂಡನು. ಅಷ್ಟರಲ್ಲಿ ಬೆಳಗಿನ ಜಾವದ ವಾದ್ಯಗಳು ಮೊಳಗತೊಡಗಲು, ನನಗೆ ಎಚ್ಚರಾಯಿತು. ಎಂದು ಹೇಳಿದಳು. ಆಗ ದುರ್ಯೋಧನನು ಖಡ್ಗಕ್ಕೆ ಹಾಕಿದ ಕೈಯನ್ನು ಹಿಂದಕ್ಕೆ ತಕ್ಕೊಂಡು ಒಳ್ಳೇ ಆಶ್ಚರ್ಯದಿಂದ ಚಕಿತನಾಗಿ ಓಹೋ, ಇವಳು ತನ್ನ ಕನಸಿನ ಸುದ್ದಿಯನ್ನು ಹೇಳುತ್ತಿರುವಳು. ಸುಮ್ಮಸುಮ್ಮನೆ ನಾನು ಇವಳ ಮೇಲೆ ತಪ್ಪು ಹೊರಿಸಿದ್ದೆನು. ಪತಿವ್ರತಾಶಿರೋಮಣಿಯಾದ ಇವಳು ತನ್ನ ಸ್ವಪ್ನದ ಕಥೆಯನ್ನು ಬೇಗನೆ ಮುಗಿಸಿದಳು; ಇಲ್ಲದಿದ್ದರೆ ಸಂಶಯಗೊಂಡ ಮನಸಿನಿಂದ ನಾನು ಎಂಥ ಕೆಟ್ಟಕೆಲಸಗಳನ್ನು ಮಾಡುತ್ತಿದ್ದೆನೋ! ಏನೋ!! ದೇವರೇ ಪಾರುಮಾಡಿದನು. ನಿಷ್ಕಾರಣವಾಗಿ ನನ್ನ ಮೇಲೆ ಬರುತ್ತಿದ್ದ ಸ್ತ್ರೀಹತ್ಯಾ ಪಾತಕವು ದೈವಯೋಗದಿಂದಲೇ ದೂರಾಯಿತು. ಎಂದು ಸಮಾಧಾನಪಟ್ಟನು ಆದರೂ ಇವರು ಇನ್ನು ಮುಂದೆ ಏನು ಮಾತಾಡುವರೋ ಕೇಳು

ಬೇಕೆಂದು ಅಲ್ಲಿಯೇ ಸುಮ್ಮನೆ ನಿಂತುಕೊಂಡನು. ಆ ಬಳಿಕ ಗೆಳತಿಯು— ಗೆಳತೀ, ಭಾನುಮತಿ, ಇದು ಕೆಟ್ಟ ಕನಸು; ಇದಕ್ಕೆ ಬೇಗನೆ ಶಾಂತಿಯನ್ನು ಮಾಡಿಸು; ಅಂದರೆ ಅರಿಷ್ಟವು ದೂರಾಗುವದು ಎಂದು ಹೇಳಿ, ಆಕಾಶದ ಕಡೆಗೆ ಕೈಮುಗಿದು, ಎಲೈ ದೇವೀ, ಭವಾನೀ, ಶಾಂಕರೀ ನಮ್ಮ ಈ ಕುರುಕುಲವನ್ನು ರಕ್ಷಿಸು! ರಕ್ಷಿಸು!! ಎಂದು ಬೇಡಿಕೊಂಡಳು.

ಅಷ್ಟರಲ್ಲಿ ಬಾಲಸೂರ್ಯನು ಮೇಲಕ್ಕೇರಿ ತನ್ನ ಕೆಂಪು ಕಿರಣಗಳನ್ನು ಉದ್ಯಾನದೊಳಗಿನ ಲತಾಮಂಟಪಗಳ ಮೇಲೆ ಹರಹಿದ ಕಾರಣ ಅಲ್ಲಿಯು ನೆಲವು ಕೇಶರ ಕಸ್ತೂರಿಗಳಿಂದ ಸಾರಣೆ ಮಾಡಿದಂತೆ ಕಾಣಿಸುತ್ತಿತ್ತು. ಭಾನುಮತಿಯು ಮೇಲಕ್ಕೇರಿ ಬಂದ ಸೂರ್ಯನಾರಾಯಣನನ್ನು ಕಂಡು ಅವನ ಪೂಜಾನಿಮಿತ್ತವಾಗಿ ಸಾಹಿತ್ಯಗಳನ್ನು ಕೊಡೆಂದು ದಾಸಿಗೆ ಆಜ್ಞಾಪಿಸಿದಳು. ಮರೆಗೆ ನಿಂತು ಇದನ್ನೆಲ್ಲ ನೋಡುತ್ತಿದ್ದ ದುರ್ಯೋಧನನು ಭಾನುಮತಿಯು ಹತ್ತರ ಹೋಗಲಿಕ್ಕೆ ಇದೇ ತಕ್ಕ ಪ್ರಸಂಗವೆಂದು ಅರಿತು ದಾಸಿಯು ಕೈಯೊಳಗಿನ ಪೂಜಾ ಸಾಹಿತ್ಯಗಳ ತಟ್ಟೆಯನ್ನು ತಕ್ಕೊಂಡು, ಸೂರ್ಯಾಭಿಮುಖವಾಗಿ ನಿಂತಿರುವ ಭಾನುಮತಿಯ ಹಿಂದ ನಿಂತುಕೊಂಡು ಪೂಜಾದ್ರವ್ಯಗಳನ್ನು ಕೊಡುತ್ತಿದ್ದನು. ಭಾನುಮತಿಯು ಹಿಂದಿರುಗಿ ನೋಡದೆ ಸೂರ್ಯನನ್ನೇ ನೋಡುತ್ತ ಎಲೈ ಸಹಸ್ರರಶ್ಮಿಯವಾದ ಸೂರ್ಯನಾರಾಯಣನೇ ನಿನಗೆ ನಾನು ಅನನ್ಯಭಾವದಿಂದ ನಮಸ್ಕರಿಸುತ್ತೇನೆ. ನನಗೆ ರಾತ್ರಿ ಬಿದ್ದ ಕೆಟ್ಟ ಕನಸಿನ ಅರಿಷ್ಟವು ನನ್ನ ಪ್ರಾಣನಾಥರಿಗೂ ಅವರ ತಮ್ಮಂದಿರಿಗೂ ಬಡಕೊಳ್ಳದಂತೆ ದಯಪಾಲಿಸು ಎಂದು ಬೇಡಿಕೊಂಡಳು. ತರುವಾಯ ಬೇರೆ ದೇವತೆಗಳ ಪೂಜೆಗಾಗಿ ಇಷ್ಟಿಷ್ಟು ಹೂವುಗಳನ್ನು ಕೊಡೆಂದು ದಾಸಿಗೆ ಬೇಡಲು, ದುರ್ಯೋಧನನು ಹೂಗಳನ್ನು ಕೊಡುವಾಗ ಬೇಕೆಂತಲೇ ಕೆಲವು ಹೂವುಗಳನ್ನು ನೆಲದಮೇಲೆ ಚಲ್ಲಿದನು. ದೇವಿಯು ದಾಸಿಗೆ ಸಿಟ್ಟುಮಾಡುತ್ತ ಹಿಂದಿರುಗಿ ನೋಡುತ್ತಾಳೆ! ಸ್ವತ ಮಹಾರಾಜರೇ ಪೂಜಾದ್ರವ್ಯಗಳನ್ನು ಹಿಡಕೊಂಡು ದಾಸಿಯ ಸ್ಥಳದಲ್ಲಿ ನಿಂತಿರುವರು, ಮತ್ತು ದೇವಿ, ಸಿಟ್ಟಾಗಬೇಡ. ಈ ಪರಿಜನಕ್ಕೆ ಇಂಥ ಕೆಲಸಗಳನ್ನು ಮಾಡುವ ಅಭ್ಯಾಸವಿಲ್ಲ. ಅವರಿಗೆ ಶಿಕ್ಷಣವನ್ನು ಕೊಡುವದು ನಿನ್ನ ಕೈಯಲ್ಲಿ ಅದೆ. ನಾನಾದರೂ ನಿನ್ನ ಪರಿಜನರಲ್ಲಿ ಒಬ್ಬನೆಂದು ತಿಳಿ. ಮುಗುಳುನಗೆಯಿಂದಲೂ, ಮೃದುಮಧುರ ಭಾಷಣಗಳಿಂದಲೂ ನನಗೂ ಶಿಕ್ಷಣವನ್ನು ಕೊಡು; ಎಂದು ವಿನಯದಿಂದ ಹೇಳಿಕೊಳ್ಳುತ್ತಿರುವರು. ಇದನ್ನು ಕಂಡು ಭಾನುಮತಿಯು ನಾಚಿ ಮೈಮೇಲಿನ ವಸ್ತ್ರಗಳನ್ನು ಸಾವರಿಸಿಕೊಂಡು— ಒತ್ತಟ್ಟಿಗೆ ಸರಿದು ಮುಗುಳುನಗೆಯಿಂದಲೂ ಅತಿ ವಿನಯದಿಂದಲೂ ಪ್ರಾಣದೊಡೆಯರೇ, ಈ ಪಾದಗಳಿಗೆ ಜಯವಾಗಬೇಕೆಂದು ನಾನು ಒಂದು ವ್ರತವನ್ನು ಮಾಡುವ ಸಂಕಲ್ಪವನ್ನು ಮಾಡಿದ್ದೇನೆ. ಅದನ್ನು ಮಾಡಿದ ಹೊರತು ನನ್ನ ಮನಸಿಗೆ ಸಮಾಧಾನವಾಗುವದಿಲ್ಲ. ಅದಕ್ಕೆ ತಾವು ಅಪ್ಪಣೆಯನ್ನು ದಯಪಾಲಿಸುವಿರೆಂದು ಬೇಡಿಕೊಳ್ಳುತ್ತೇನೆ. ಆ ಮಾತಿಗೆ ದುರ್ಯೋಧನನು ಪ್ರಿಯೆ, ನಿನ್ನ ಕನಸಿನ

ವೃತ್ತಾಂತವನ್ನೆಲ್ಲ ನಾನು ಕೇಳಿದೆನು. ಅವರಲ್ಲೇನೂ ಹುರುಳಿಲ್ಲ. ವ್ರತೋಪವಾಸಾದಿಗಳಿಂದ ನಿನ್ನ ಈ ಸುಕುಮಾರ ದೇಹವನ್ನು ಏತಕ್ಕೆ ಕಷ್ಟಪಡಿಸುವಿ! ರಣಭೂಮಿಯಲ್ಲಿ ನಾಲ್ಕೂ ಕಡೆಗೂ ಪಸರಿಸಿರುವ ಪ್ರಚಂಡವಾದ ಸೈನ್ಯವೂ, ಕರ್ಣ ದ್ರೋಣರಂಥ ಮಹಾ ಮಹಾ ಪರಾಕ್ರಮಿಗಳೂ, ಶೌರ್ಯದಲ್ಲಿ ಒಬ್ಬರಿಗಿಂತ ಒಬ್ಬರು ಮಿಗಿಲಾಗಿರುವ ನನ್ನ ನೂರುಮಂದಿ ತಮ್ಮಂದಿರೂ ಇರಲು, ನಿನಗೆ ಯಾತರಭಯವು! ಎಂದು ಧೈರ್ಯವನ್ನು ಹೇಳಲು, ಭಾನುಮತಿಯು ಸಮಾಧಾನಪಟ್ಟು, ಆಹುದು, ಪ್ರಾಣನಾಥರೆ, ಆಹುದು; ತಮ್ಮ ಆಜ್ಞೆಯು ನಿಜವು. ಈ ಪಾದಗಳ ಸನ್ನಿಧಿಯಲ್ಲಿ ನಾನು ಇದ್ದರೆ ನನಗೆ ಯಾವ ಭಯವೂ ಇಲ್ಲ. ಸರ್ವಕಾಲವೂ ಇತ್ತಕಡೆಯು ಒಡೆಯರ ಮನೋರಥವನ್ನು ಪೂರ್ಣ ಮಾಡುವದೊಂದೇ ಚಿಂತೆಯಲ್ಲದೆ ಬೇರೆ ಏನುಂಟು? ಎಂದು ಬಿನ್ನವಿಸಿದಳು. ಅದಕ್ಕೆ ದುರ್ಯೋಧನನು — ತನ್ನ ಮನಸ್ಸಿನೊಳಗಿನ ಉದ್ದೇಶವನ್ನು ಪ್ರಿಯಪತ್ನಿಗೆ ತಿಳಿಸಿದನು; ಆಗ ಆ ದಂಪತಿಗಳ ಮೋರೆಯ ಮೇಲೆ ಉಲ್ಹಾಸದ ಕಳೆಯು ಉಕ್ಕುತ್ತಿತ್ತು. ಅದೇ ಕಾಲಕ್ಕೆ ಒಂದು ದೊಡ್ಡ ಬಿರುಗಾಳಿಯು ಬೀಸಿತು. ಸಮೀಪದಲ್ಲಿ ನಾಲ್ಕೂಕಡೆಗೆ ಗದ್ದಲವಾದದ್ದು ಕೇಳಿಬಂತು. ಆಗ ಭಾನುಮತಿಯು ಹೆದರಿ ದುರ್ಯೋಧನನ ಕೊರಳಿಗೆ ಗಟ್ಟಿಯಾಗಿ ಅಪ್ಪಿಹಿಡಿದು ಬಾಹು ಗಾಢವಾಗಿ ಅಪ್ಪಿಕೊಂಡಳು. ದುರ್ಯೋಧನನು ಮನಸ್ಸಿನಲ್ಲಿಯೇ ಬಿರುಗಾಳಿಯ ಉಪಕಾರವನ್ನು ನೆನಸುತ್ತ ಹರ್ಷಭರಿತನಾದನು. ಆ ಬಳಿಕ ಅವರು ಒಳ್ಳೆಯ ಸಮೀಪದಲ್ಲಿದ್ದ ಪ್ರಿಯಾಮಂದಿರಕ್ಕೆ ಬಂದರು. ಅಲ್ಲಿ ಅವರು ಕೆಲವು ಕಾಲವನ್ನು ವಿನೋದದಿಂದ ಕಳೆದರು. ಅಷ್ಟರಲ್ಲಿ ಜಯದ್ರಥನ ತಾಯಿಯು, ತನ್ನ ಸೊಸೆಯೂ ದುರ್ಯೋಧನನ ತಂಗಿಯೂ ಆದ ದುಃಶೀಲೆಯನ್ನು ಕರಕೊಂಡು ಭಯಾತುರರಾಗಿ ಕಣ್ಣೀರು ಸುರಿಸುತ್ತ ದುರ್ಯೋಧನನ ಬಳಿಗೆ ಬಂದರು. ಜಯದ್ರಥನ ತಾಯಿಯು ಅಪ್ಪಾ, ದುರ್ಯೋಧನಾ, ಅರ್ಜುನನು ಪುತ್ರಶೋಕದಿಂದ ಸಿಟ್ಟಾಗಿ "ಜಯದ್ರಥನನ್ನು ಇಂದು ಸೂರ್ಯಾಸ್ತಮಾನದೊಳಗಾಗಿ ಕೊಲ್ಲುವೆನು" "ಇಲ್ಲವೆ ಅಗ್ನಿಕುಂಡದಲ್ಲಿ ಹಾರಿಕೊಳ್ಳುವೆನು". ಎಂದು ಪ್ರತಿಜ್ಞೆಯನ್ನು ಮಾಡಿರುವನು. ಹ್ಯಾಗಾದರೂ ಮಾಡಿ ನಿನ್ನ ತಂಗಿಯ ಸೌಭಾಗ್ಯವನ್ನು ಉಳಿಸಿಕೊ. ಕಂದಯ್ಯಾ! ಎಂದು ಪರಿಪರಿಯಿಂದ ಬೇಡಿಕೊಳ್ಳಹತ್ತಿದಳು. ದುಃಶೀಲೆಯಂತೂ ದೊಡ್ಡ ಧ್ವನಿತೆಗೆದು ಬೋರಾಡಿ ಅಳಹತ್ತಿದಳು. ಅದಕ್ಕೆ ದುರ್ಯೋಧನನು ತಂಗಿ, ಅಂಜಬೇಡ, ಸಮಾಧಾನ ತಾಳು. ಜಯದ್ರಥನ ಕೂದಲಿಗೆ ಸಹ ಧಕ್ಕೆ ಹತ್ತಲಾರದೆಂದು ತಿಳಿ. ಆ ಹೇಡಿಯಿಂದಲೇನಾಗುವದು! ಅವನು ಕಡೆಗೆ ಅಗ್ನಿಯ ಪಾಲಾಗುವದೇ ನಿಶ್ಚಯವು! ಆಗಲು ಶತ್ರುಗಳು ಅನಾಯಾಸವಾಗಿ ನಾಶಹೊಂದುವರು. ನೀವೇಕೆ ಚಿಂತೆಮಾಡುತ್ತೀರಿ! ಎಂದು ಅವರಿಗೆ ಅಭಯವಚನವನ್ನು ಕೊಟ್ಟು, ತನ್ನ ಸೇವಕರಿಂದ ರಥವನ್ನು ತರಿಸಿಕೊಂಡು, ಭಾನುಮತಿಗೆ ಪರಿವಾರದೊಂದಿಗೆ ರಾಜಮಂದಿರಕ್ಕೆ ಹೋಗೆಂದು ಅಪ್ಪಣೆಯನ್ನು ಕೊಟ್ಟು, ತಾನು ರಥವನ್ನೇರಿ ರಣಭೂಮಿಯಕಡೆಗೆ ಸಾಗಿದನು.

# ೩ನೆಯ ಪ್ರಕರಣ.

## ಶಸ್ತ್ರತ್ಯಾಗ.

ಇತ್ತ ರಣಭೂಮಿಯಲ್ಲಿ ಉಭಯ ಸೈನ್ಯಗಳು ಒಳ್ಳೇ ವೀರಾವೇಶದಿಂದ ಕಾದುತ್ತಿದ್ದವು. ಅರ್ಜುನನು ಜಯದ್ರಥನನ್ನು ಕೊಂದು ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡಿದನು. ಎರಡೂ ಸೈನ್ಯಗಳೊಳಗಿನ ಸಾವಿರಾರು ಸೈನಿಕರೂ, ಆನೆಕುದುರೆಗಳೂ, ಗಾಯಹೊಂದಿ ರಣಭೂಮಿಯಲ್ಲಿ ಸತ್ತು ಬಿದ್ದಿದ್ದವು. ಅವರ ಶರೀರದಿಂದ ರಕ್ತದ ನದಿಗಳು ಹರಿಯುತ್ತಿದ್ದವು. ರಣಭೂಮಿಯ ನೆಲವು ರಕ್ತಮಾಂಸಗಳಿಂದ ಕೆಸರಾಗಿತ್ತು. ಕುರುಸೇನಾನಾಯಕರಾದ ದ್ರೋಣಾಚಾರ್ಯರು ಶತ್ರುಸೈನ್ಯದ ಕೂಡ ಒಳ್ಳೇ ನಿಕರದಿಂದ ಕಾದುತ್ತಿರಲು, ಅವರನ್ನು ಸೋಲಿಸುವದು ಪಾಂಡವರಿಗೆ ಬಹಳ ಕಷ್ಟವಾಯಿತು. ಆಗ ಶ್ರೀಕೃಷ್ಣನು ಒಂದು ಉಪಾಯವನ್ನು ಯೋಚಿಸಿದನು. ಅದು ಯಾವದೆಂದರೆ:—ಭೀಮಸೇನನು ಕುರುಸೈನ್ಯದೊಳಗಿನ ಅಶ್ವತ್ಥಾಮವೆಂಬದೊಂದು ಆನೆಯನ್ನು ಕೊಂದನು; ಆಗ "ಅಶ್ವತ್ಥಾಮೋ ಹತಃ ಅಶ್ವತ್ಥಾಮೋ ಹತಃ" ಎಂಬ ಸುದ್ದಿಯು ರಣಭೂಮಿಯಲ್ಲಿ ನಾಲ್ಕೂಕಡೆಗೆ ಹಬ್ಬಿತು. ದ್ರೋಣಾಚಾರ್ಯರು ಈ ಸುದ್ದಿಯನ್ನು ಕೇಳಿ ಸಂಶಯಗೊಂಡು ದೇಹವನ್ನು ತಮ್ಮ ರಥದಲ್ಲಿಯೇ ಬಿಟ್ಟು ಸತ್ಯಸಂಧನೂ ಅಜಾತಶತ್ರುವೂ ಆದ ಧರ್ಮರಾಜನನ್ನು ಈ ಮಾತು ಸಟಿಯೋ ದಿಟವೋ ಎಂಬ ಬಗ್ಗೆ ಕೇಳಬಂದರು; ಧರ್ಮರಾಜನಿಗೆ ನಿಜವಾದ ಸಂಗತಿಯು ಗೊತ್ತಿದ್ದರೂ ಶ್ರೀಕೃಷ್ಣನು ಮೊದಲೇ ಸೂಚಿಸಿದ ಮೇರೆಗೆ "ಅಶ್ವತ್ಥಾಮೋ ಹತಃ ನರೋ ವಾ ಕುಂಜರೋ ವಾ" ಎಂದು ಕಿವಿಯ ಮೇಲೆ ಕೈಯಿಟ್ಟುಕೊಂಡನು. ಆಚಾರ್ಯರು ಮಗನೇ ಸತ್ತನೆಂದು ತಿಳಿದು ಒಳ್ಳೇ ದುಃಖದಿಂದ ಕೈಯೊಳಗಿನ ಧನುಷ್ಯ ಬಾಣಗಳನ್ನು ಕೆಳಗಿಟ್ಟು ಸ್ವಸ್ಥರಾಗಿ ಯೋಗಬಲದಿಂದ ಜೀವವನ್ನು ನೆತ್ತಿಗೇರಿಸಿಕೊಂಡು ಕುಳಿತರು ಆಗ ದ್ರುಪದರಾಜನ ಮಗನಾದ ದೃಷ್ಟದ್ಯುಮ್ನನು ತನ್ನ ಪೂರ್ವ ವೈರವನ್ನು ಸಾಧಿಸಲಿಕ್ಕೆ ಇದೇ ಸಮಯವೆಂದು ನೆನಿಸಿ ನೆಟ್ಟಗೆ ದ್ರೋಣಾಚಾರ್ಯರ ಬಳಿಗೆ ಹೋಗಿ ಅವರ ಶಿರಚ್ಛೇದವನ್ನು ಮಾಡಿದನು. ಅದನ್ನು ಕಂಡು ಕೌರವ ಸೈನಿಕರು ಆಕಾಶ ಪಾತಾಳಗಳು ಒಂದಾಗುವಂತೆ ಕೋಲಾಹಲವನ್ನು ಎಬ್ಬಿಸಿದರು. ಈ ಭಯಂಕರವಾದ ಗದ್ದಲವನ್ನು ಕೇಳಿ ಅಶ್ವತ್ಥಾಮನು ಶಸ್ತ್ರಧಾರಿಯಾಗಿ ಬಂದು, ಒಹೋ, ಇದೇನು! ಪ್ರಳಯಕಾಲಕ್ಕೆ ಬಿಟ್ಟ ಝಂಝಾವಾತದಿಂದ ಕ್ಷುಬ್ಧವಾದ ಪುಷ್ಕರಾವರ್ತ ಮೇಘಗಳ ಗಡಗಡಾಟದ ಪ್ರತಿಧ್ವನಿಯೋ ಏನೋ, ಅನ್ನುವಂತೆ ರಣಭೂಮಿಯಲ್ಲಿ ಭಯಂಕರ ಶಬ್ದವು ಯಾಕಾಗುತ್ತಿದ್ದೀತು? ತಾತನು ನಿಜವಾದ ಪರಾಕ್ರಮದಿಂದ ಹಗೆಗಳನ್ನು ಸಂಹರಿಸಿದ್ದರಿಂದ ಕುರುಸೈನ್ಯವು ಆನಂದದಿಂದ ಕೋಲಾಹಲವನ್ನು ಎಬ್ಬಿಸಿದಂತೆ ತೋರುವದು. ಒಳ್ಳೇದು;

ಹೋಗಿ ನೋಡಿದರೆ ತಾನೇ ಗೊತ್ತಾಗುವದು, ಎಂದು ರಣಭೂಮಿಯಕಡೆಗೆ ಸಾಗಲು, ಕುರು ಸೈನ್ಯದೊಳಗಿನ ಕರ್ಣ ಮೊದಲಾದವರು ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದರು. ಅಶ್ವತ್ಥಾಮನು ಇದನ್ನು ಕಂಡು ಆಶ್ಚರ್ಯಚಕಿತನಾಗಿ ಎಲೈ ವೀರಾಗ್ರಣಿಗಳೇ, ಅಲೌಕಿಕ ವೀರನಾದ ನಮ್ಮ ತಾತನು ಸೇನಾಪತಿಯಾಗಿರಲು, ನೀವೆಲ್ಲರೂ ಹೀಗೆ ಯಾಕೆ ಬೆಂಗೊಟ್ಟೋಡುವಿರಿ? ಎಲೈ ಹೇಡಿಗಳಿರಾ, ಮನುಷ್ಯರಿಗೆ ಮರಣವು ಎಂದಿಗಾದರೂ ತಪ್ಪುವದೆ? ಸಾವಿಗಂಜಿ ಯಾಕೆ ಓಡುತ್ತಿರುವಿರಿ? ಶತ್ರುಗಳ ಸಂಗಡ ಕಾದಿ ವೀರಸ್ವರ್ಗ ಪಡೆಯುವದನ್ನು ಬಿಟ್ಟು ಓಡಿಹೋಗುವದರಲ್ಲಿ ಅದಾವ ಪುರುಷಾರ್ಥವಿರುವದು? ಎಲಾ! ನನ್ನ ಮಾತಿಗೆ ಯಾರೂ ಕಿವಿಗೊಡಲೊಲ್ಲರಲ್ಲ! ಆದದ್ದಾದರೂ ಏನು? ಎಂದು ಒದರುತ್ತಿರಲು, ಓಡಿ ಹೋಗುವವರೊಳಗಿನವನೊಬ್ಬನು—ಸ್ವಾಮಿ ಇನ್ನೆಲ್ಲಿಯ ನಿಮ್ಮ ತಾತರು? ಅವರ ಅವತಾರವು ಆಗಲೇ ಮುಗಿದು ಹೋಗಿರುವದು ಅಂದನು. ಆ ಮಾತನ್ನು ನಂಬದೆ ಅಶ್ವತ್ಥಾಮನು:— ಎಲಾ ನೀಚಾ, ನಮ್ಮ ತಂದೆಯ ವಿಷಯವಾಗಿ ಹೀಗೆ ಕೆಟ್ಟ ಮಾತುಗಳನ್ನು ಆಡುತ್ತೀಯಾ? ಈ ಮಾತನ್ನು ಆಡುವ ನಿನ್ನ ನಾಲಿಗೆಯು ಯಾಕೆ ಕಳಚಿ ಬೀಳಲಿಲ್ಲ? ಈ ಪಾಂಡವರಲ್ಲಿ ಅವನನ್ನು ಸೋಲಿಸುವಂಥ ಗಂಡಸು ಅದಾವನಿರುವನು? ಎಂದು ಮಾತಾಡುತ್ತಿರುವಷ್ಟರೊಳಗೆ ದ್ರೋಣಾಚಾರ್ಯರ ಸಾರಥಿಯು ಘಾಯಪಟ್ಟು ಅಲ್ಲಿಗೆ ಬಂದನು. ಅವನು ಅಶ್ವತ್ಥಾಮನಿಗೆ ನಡೆದ ಸಂಗತಿಯನ್ನೆಲ್ಲ ಚನ್ನಾಗಿ ವರ್ಣಿಸಿ ಹೇಳಿದನು. ತಂದೆ ಸತ್ತ ಸುದ್ದಿಯು ಕಿವಿಗೆ ಬಿದ್ದಕೂಡಲೆ ಅಶ್ವತ್ಥಾಮನು— ಅಯ್ಯೋ! ಅಪ್ಪಾ! ಹಾ! ತಂದೆಯೇ! ಎಂದು ಮೂರ್ಛೆಯಿಂದ ನೆಲಕ್ಕೆ ಬಿದ್ದನು. ಕೆಲಹೊತ್ತಿನ ಮೇಲೆ ಎಚ್ಚತ್ತು, ಹಾ! ಸುತವತ್ಸಲ, ಹಾ! ಶೌರ್ಯರಾಶಿಯೆ, ಹಾ! ಶಿಷ್ಯಪ್ರಿಯನೆ, ನನ್ನ ಸಲುವಾಗಿ ನೀನು ವ್ಯರ್ಥವಾಗಿ ಜೀವಕ್ಕೆ ಎರವಾದೆಯಾ? ನನ್ನ ಮರಣದ ಸುಳ್ಳು ಸುದ್ದಿಯನ್ನು ಕೇಳಿ ಕೂಡಲೆ ನೀನು ಸಾಯಲನುವಾದೆ; ಆದರೆ ನಾನು ಮಾತ್ರ ನಿನ್ನ ಮರಣದ ಸುದ್ದಿಯನ್ನು ಕೇಳಿದರೂ ಕೂಡ ಇನ್ನೂ ಜೀವದಿಂದಿರುವೆನು. ನಾನು ಎಂಥ ಕೃತಘ್ನನು! ಎಂಥ ನಿರ್ದಯನು!! ಎಂಥ ಪಾಪಿಯು!!! ಎಂದು ನೆನೆನೆನಿಸಿ ದೊಡ್ಡ ಧ್ವನಿ ತೆಗೆದು ಅಳಹತ್ತಿದನು.

ಆ ಸಮಯದಲ್ಲಿ ಕೃಪನು ದುಃಖಪಡುತ್ತ ಅಲ್ಲಿಗೆ ಬಂದನು. ಅಶ್ವತ್ಥಾಮನು ತನ್ನ ಅನಿವಾರ ದುಃಖದಿಂದ ಇನ್ನೂ ಹಂಬಲಿಸಿ ಹಲುಬುತ್ತಲೇ ಇದ್ದನು. ದ್ರೋಣಾಚಾರ್ಯರ ಸಾರಥಿಯು ಅವನಿಗೆ ಕೃಪಾಚಾರ್ಯರು ಬಂದ ಸುದ್ದಿಯನ್ನು ಹೇಳಿದನು; ಸೋದರಮಾವನನ್ನು ನೋಡಿದ ಕೂಡಲೆ ಅಶ್ವತ್ಥಾಮನ ಗಂಟಲ ಶಿರಗಳು ಉಬ್ಬಿ ಬಾಯಿಂದ ಮಾತುಗಳು ಹೊರಡದಂತೆ ಆದವು! ಕೃಪನು ಅವನಿಗೆ ಕಂದಾ, ಇನ್ನು ಮೇಲೆ ದುಃಖಿಸಿ ಫಲವೇನು? ಸಮಾಧಾನವನ್ನು ತಾಳು, ಎಂದು ಸಂತೈಸುತ್ತಿರಲು, ಅಶ್ವತ್ಥಾಮನು—ಮಾವಾ, ತಾತನು ಮರಣಹೊಂದಿದ ಮೇಲೆ ನಾನು ಇನ್ನು ಏತಕ್ಕೆ ಬದುಕಲಿ? ನಾನಿಲ್ಲದಿರಲು ಪರಲೋಕದಲ್ಲಿ ಅವನಿಗೆ ಅಡಿಗಡಿಗೆ ತೊಂದರೆಯಾಗುತ್ತಿದ್ದೀತು. ಬೇಗನೆ

ಹೋಗಿ ಆತನನ್ನು ಸಮಾಧಾನ ಪಡಿಸುತ್ತೇನೆ. ಎಂದು ನಿಟ್ಟುಸಿರು ಬಿಟ್ಟು ಸುಮ್ಮನಾದನು. ಆಗ ಕೃಪನು ಮಗುವೆ, ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ತಂದೆಯ ಸೇವೆಯನ್ನು ಮಾಡುವದು ಮಗನ ಕರ್ತವ್ಯವು. ನೀನು ಜೀವದಿಂದಿದ್ದು ತರ್ಪಣೋದಕದಿಂದ ಸತ್ತ ತಂದೆಯನ್ನು ಸಂತುಷ್ಟಪಡಿಸುವದು ನಿನ್ನ ಕರ್ತವ್ಯವು. ಆದಕಾರಣ ನೀನು ಇನ್ನು ಮೇಲೆ ವ್ಯರ್ಥವಾಗಿ ಚಿಂತಿಸಬೇಡ. ಎಂದು ಹೇಳಿದನು. ಅಶ್ವತ್ಥಾಮನು ಮಾವಾ ಬ್ರಾಹ್ಮಣರು ಈ ಶಸ್ತ್ರಗಳನ್ನು ಹಿಡಿಯಕೂಡದು, ಈ ಶಸ್ತ್ರದಿಂದಲೇ ನಮ್ಮ ತಂದೆಯು ಮೃತಪಟ್ಟನು. ಆದಕಾರಣ ನಾನು ಇಂದಿನಿಂದ ಈ ಶಸ್ತ್ರಗಳನ್ನು ಬಿಟ್ಟುಬಿಡುವೆನು. ಎಂದು ಕೈಯೊಳಗಿನ ಶಸ್ತ್ರವನ್ನು ನೆಲದಮೇಲೆ ಚಲ್ಲಿಕೊಟ್ಟನು. ಆಗ ಮುಂದಿನ ಶಬ್ದಗಳು ಅಲ್ಲಿ ಕುಳಿತವರ ಕಿವಿಗೆ ಬಿದ್ದವು. "ಎಲ ಎಲೈ ಕುರುಪಾಂಡವರ ಸೈನ್ಯದೊಳಗಿನ ವೀರಾಗ್ರಣಿಗಳೇ ಕೇಳಿರಿ, ದ್ರೋಣಾಚಾರ್ಯರು ಪುತ್ರ ಶೋಕದಿಂದ ಆಯುಧಗಳನ್ನು ಬಿಟ್ಟು ಧ್ಯಾನಾಸಕ್ತರಾಗಿ ಕುಳಿತ ಸಮಯದಲ್ಲಿ ಆ ದುಷ್ಟ ಪಾಂಚಾಲ ತನಯನಾದ ಧೃಷ್ಟದ್ಯುಮ್ನನು ಕೊರಳು ಕೊಯ್ಯುವದನ್ನು ಕಂಡು ನೀವೆಲ್ಲರು ಸುಮ್ಮನಿರಬಹುದೇ? ಧರ್ಮಭ್ರಷ್ಟರೇ, ಪಾತಕಿಗಳೇ, ಈ ಧರ್ಮವಿರುದ್ಧವಾದ ಕಾರ್ಯವನ್ನು ಮಾಡಗೊಡಲಿಕ್ಕೆ ನಿಮ್ಮ ಮನಸಿಗೆ ನಾಚಿಕೆ ಬರಲಿಲ್ಲವೇ?" ಈ ಉದ್ಗಾರಗಳನ್ನು ಕೇಳಿದ ಕೂಡಲೆ ಅಶ್ವತ್ಥಾಮನಲ್ಲಿ ವೀರಾವೇಶವು ಜಾಗ್ರತವಾಯಿತು. ಅವನು ಸಿಟ್ಟಿನಿಂದ ಸಂತಪ್ತನಾದನು; ಅವನ ಮೈಯಲ್ಲಿ ನಡುಗು ಹುಟ್ಟಿತು. ಕಣ್ಣುಗಳು ರಕ್ತವನ್ನು ಕಾರುವವೋ ಏನೋ! ಅನ್ನುವಂತೆ ಕೆಂಪಾದವು. ಕೂಡಲೆ ಅವನು ಶಸ್ತ್ರವನ್ನು ತಕ್ಕೊಂಡು ಎದ್ದು ನಿಂತು "ಎಲಾ ನೀಚಾ, ಪಾಂಚಾಲ ಕುಲಾಧಮಾ, ಈ ಅಶ್ವತ್ಥಾಮನು ಜೀವದಿಂದಿರಲು ನಮ್ಮ ತಾತನ ಶುಭ್ರವಾದ ಜಂಡಿಕೆಗೆ ಹ್ಯಾಗೆ ಕೈ ಹಚ್ಚಿದೆ? ಎಲಾ ರಣಹೇಡಿಯೇ ಪ್ರಳಯಕಾಲದ ಮಾರುತನಂತೆ ನಾನು ಈ ಪಾಂಡು ಪಾಂಚಾಲಸೇನೆಯನ್ನು ಕಸದಂತೆ ಹಾರಿಸಿ ಬಿಡುವೆನೆಂಬದನ್ನು ಮರೆತೆಯಾ? ಮಾವಾ ಯಾವನು ನಮ್ಮ ತಂದೆಯನ್ನು ಕೊಂದನೋ, ಯಾವನು ಈ ಕಾರ್ಯಕ್ಕೆ ಸಹಾಯ ಮಾಡಿದನೋ, ಯಾವನು ಈ ಕಾರ್ಯಕ್ಕೆ ಸಮ್ಮತಿಯನ್ನು ಕೊಟ್ಟನೋ, ಯಾವಾತನು ಈ ಕಾರ್ಯವನ್ನು ನೋಡಿ ಸುಮ್ಮನೆ ಇದ್ದನೋ, ಅವನು ಶ್ರೀಕೃಷ್ಣನಿರಲಿ, ಧರ್ಮನಿರಲಿ, ಭೀಮನಿರಲಿ, ಅರ್ಜುನನಿರಲಿ, ದ್ರುಪದತನಯನಿರಲಿ, ಆ ಶಸ್ತ್ರಧಾರಿಗಳಾದ ನರಪಶುಗಳನ್ನೆಲ್ಲ ಕೊಂದು ಅವರ ರಕ್ತಮಾಂಸಗಳಿಂದ ಭೂತಗಳಿಗೆ ಉಣಬಡಿಸುವೆನು. ಇದೇ ನನ್ನ ಪ್ರತಿಜ್ಞೆಯು" ಎಂದು ವೀರಾವೇಶದಿಂದ ಮಾತಾಡುತ್ತಿರಲು, ಕೃಪನು:— ಕಂದಾ, ನೀನು ಅಂಥವನೇ ಸರಿ. ಭೀಷ್ಮ ದ್ರೋಣರ ತರುವಾಯ ಕೌರವರ ಸೈನ್ಯಕ್ಕೆ ನೀನೇ ನಾಯಕನು. ನಿನ್ನ ಹೊರತು ಮತ್ತೊಬ್ಬರು ಯಾರಿರುವರು? ಆದಕಾರಣ ನೀನೇ ಕುರುಸೈನ್ಯದ ಒಡೆತನವನ್ನು ಸ್ವೀಕರಿಸು. ಈ ಕೆಲಸವನ್ನು ನಿನಗೇ ಒಪ್ಪಿಸುವದಕ್ಕಾಗಿ ದುರ್ಯೋಧನನು ನಿನ್ನ ದಾರೀ ನೋಡುತ್ತಿದ್ದಾನು. ನಡೆ, ಬೇಗನೆ ಅಲ್ಲಿಗೆ ಹೋಗೋಣ. ಎಂದು ಇಬ್ಬರೂ ದುರ್ಯೋಧನನ ಕಡೆಗೆ ನಡೆದರು.

# ೪ ನೆಯ ಪ್ರಕರಣ.

## ವ್ಯಾಗ್ವಾದ.

ಇತ್ತ ದುರ್ಯೋಧನನು ರಣಭೂಮಿಯ ಒಂದು ಮಗ್ಗಲು ಆಲದ ಮರದ ಬುಡದಲ್ಲಿ ಕರ್ಣನ ಸಂಗಡ ದ್ರೋಣಾಚಾರ್ಯರ ಸ್ವಭಾವದ ವಿಷಯವಾಗಿ ಮಾತನಾಡುತ್ತ ಕುಳಿತಿದ್ದನು ಕರ್ಣನು ಬಹುಕಾಲದಿಂದ ಭೀಷ್ಮ ದ್ರೋಣರ ವಿಷಯವಾಗಿ ಬಹಳ ಅಸೂಯಪಡುತ್ತಿದ್ದನು. ಅದಕ್ಕನುಸರಿಸಿಯೇ ಈಗ ಅವನು— ಮಿತ್ರಾ, ಆಚಾರ್ಯರ ಮನಸಿನಲ್ಲಿ ಕುರುಪಾಂಡವರನ್ನು ಸಂಹರಿಸಿ ತನ್ನ ಮಗನಾದ ಅಶ್ವತ್ಥಾಮನನ್ನು ಹಸ್ತಿನಾವತಿಯ ಗಾದಿಯ ಮೇಲೆ ಕೂಡ್ರಿಸಬೇಕೆಂಬ ಸ್ವಾರ್ಥದ ವಿಚಾರವು ಇತ್ತೆಂಬಂತೆ ತೋರುತ್ತದೆ. ಇಲ್ಲದಿದ್ದರೆ ಮಗನು ಸತ್ತನೆಂಬ ಸುದ್ದಿಯನ್ನು ಕೇಳಿದ ಮಾತ್ರಕ್ಕೆ ಶಸ್ತ್ರವನ್ನು ಚಲ್ಲಿಕೊಟ್ಟು ಆತ್ಮರಕ್ಷಣೆಯನ್ನು ಕೂಡ ಮಾಡಿಕೊಳ್ಳದೆ, ಕೂಡುತ್ತಿದ್ದನೇ? ಎಂದು ದ್ರೋಣಾಚಾರ್ಯರನ್ನು ಆಡಿಕೊಳ್ಳುತ್ತಿದ್ದನು. ದುರ್ಯೋಧನನಿಗೂ ಆಚಾರ್ಯರಬಗ್ಗೆ ಸ್ವಲ್ಪ ಸಂಶಯವು ತಟ್ಟಿತು.

ತಾವು ಮಾಡಿದ ಪ್ರತಿಜ್ಞೆಗಳನ್ನು ಅವರು ಉಪಾಯವಿಲ್ಲದೆ ಅಲ್ಲ, ಪಾಂಡವರ ಪಕ್ಷಪಾತದಿಂದ ಕೊನೆಗಾಣಿಸದೆ ಬಿಟ್ಟಿರುವರು, ಎಂದು ಅವನ ಮನವರಿಕೆಯಾಗಿತ್ತು. ಅದರಿಂದ ಅವನು ಈಗ ಕರ್ಣನು ಹೇಳುವ ಮಾತುಗಳಿಗೆ ಒಡಂಬಟ್ಟು, ತಲೆದೂಗುತ್ತಿದ್ದನು. ಅವರಿಬ್ಬರು ಮಾತಾಡುತ್ತಿರಲು ಅಶ್ವತ್ಥಾಮನೂ, ಕೃಪಾಚಾರ್ಯರೂ, ಅಲ್ಲಿಗೆ ಬಂದರು. ಆಗ ದುರ್ಯೋಧನನು ಆಚಾರ್ಯಪುತ್ರನನ್ನು ಕಂಡು ಪ್ರೇಮವನ್ನೂ, ಆದರವನ್ನೂ, ತೋರಿಸಿದ್ದರಿಂದ ಕೃಪಾಚಾರ್ಯನು ಅಶ್ವತ್ಥಾಮನ ಶೌರ್ಯವನ್ನು ವರ್ಣಿಸಿ, ಅವನ ದುಃಖವನ್ನು ಕಡಿಮೆ ಮಾಡಲಿಕ್ಕೆ ಸೈನ್ಯಾಧಿಪತ್ಯವನ್ನು ಅವನಿಗೆ ಕೊಡಬೇಕೆಂದು ದುರ್ಯೋಧನನಿಗೆ ಸೂಚಿಸಿದನು. ಅದಕ್ಕೆ ದುರ್ಯೋಧನನು ಈ ಬಗ್ಗೆ ನಾನು ಈ ಮೊದಲೇ ಕರ್ಣನಿಗೆ ಮಾತು ಕೊಟ್ಟಿದ್ದೇನೆ. ಎಂದು ಅಂದು ಮನಸ್ಸಿನಲ್ಲಿ ಆಲೋಚನೆ ಮಾಡಹತ್ತಿದನು. ಅದನ್ನು ಕಂಡು ಅಶ್ವತ್ಥಾಮನು ಒಳ್ಳೇ ಆವೇಶದಿಂದ—ರಾಜಾ, ಕೌರವೇಶ್ವರಾ, ಏನು ವಿಚಾರ ಮಾಡುತ್ತಿ ? ಸೈನ್ಯಾಧಿಕಾರವನ್ನು ನನಗೆ ಕೊಟ್ಟು ನೋಡು. ಈ ಹೊತ್ತಿನ ದಿನಸವೇ ನಾನು ಯಾವತ್ತು ಶತ್ರುಗಳನ್ನು ನಾಶಮಾಡಿ ಯುದ್ಧಕಾರ್ಯವನ್ನು ಮುಗಿಸಿ ಬಿಡುವೆನು. ಎಂದು ಪರಾಕ್ರಮದ ಮಾತುಗಳನ್ನು ಆಡಿದನು. ಈ ಗರ್ವದ ಮಾತುಗಳನ್ನು ಕೇಳಿ ಕರ್ಣನಿಗೆ ಸಹನವಾಗಲಿಲ್ಲ. ಅವನು ಹೆಮ್ಮೆಯ ಮಾತು ಆಡುವದು ಬಹು ಸುಲಭ! ಆದರೆ ಅದರಂತೆ ನಡೆಯುವದು ಬಲುಕಷ್ಟ. ಕೌರವರ ಸೈನ್ಯದಲ್ಲಿ ಇಂಥ ಕೆಲಸಕ್ಕೆ ಬಹುಮಂದಿ ಸಮರ್ಥರಿರುವರು. ಎಂದು ತಿರಸ್ಕರಿಸಿ ಮಾತನಾಡಿದನು. ಅವಕೆ

ಅಶ್ವತ್ಥಾಮನು-ಹೌದು ಅಂಗರಾಜರೇ, ನೀವನ್ನುವ ಮಾತು ನಿಜವದೆ, ಆದರೆ ನಾನು ಈಗ ದುಃಖಶೋಕಗಳ ಮೂಲಕ ಈ ಮಾತು ಆಡಿದೆನಲ್ಲದೆ ವೀರಜನರನ್ನು ನಿಂದಿಸುವ ಉದ್ದೇಶದಿಂದ ಆಡಿಲ್ಲ. ಎಂದು ಸಭ್ಯತನದಿಂದಲೂ ಮರ್ಯಾದೆಯಿಂದಲೂ ಉತ್ತರವನ್ನು ಕೊಟ್ಟನು. ಕರ್ಣನು ಇಷ್ಟಕ್ಕೆ ಸುಮ್ಮನಾಗಿ ಬಿಟ್ಟಿದ್ದರೆ ಮಾತು ಮುಗಿದು ಹೋಗುತ್ತಿತ್ತು. ಆದರೆ ಅವನು ಬಿಡದೆ-ಮೂರ್ಖಾ, ದುಃಖವಾಗಿದ್ದರೆ ಕಣ್ಣೀರು ಸುರಿಸು; ಸಿಟ್ಟು ಬಂದರೆ ಕೈಯಲ್ಲಿ ಶಸ್ತ್ರ ತಾಳಿ ಒಬ್ಬನೇ ರಣಭೂಮಿಯನ್ನು ಹೊಕ್ಕು ಪರಾಕ್ರಮವನ್ನು ತೋರಿಸು. ಹೀಗೆ ಸುಮ್ಮನೆ ಯಾಕೆ ಬಡಬಡಿಸುತ್ತೀ? ಎಂದು ಬಿರುನುಡಿಗಳಿಂದ ಅವಮಾನ ಪಡಿಸಿದನು. ಅಶ್ವತ್ಥಾಮನಂಥ ಸ್ವಾಭಿಮಾನಿಯಾದ ವೀರಾಗ್ರಣಿಗೆ ದುರ್ಯೋಧನನ ಮುಂದೆ ಆದ ಈ ಅಪಮಾನವು ಸಹನವಾಗುವದೆ? ಕೂಡಲೆ ಅವನ ಕಣ್ಣುಗಳು ಕೆಂಪಾದವು, ಒಳ್ಳೇ ಆವೇಶದಿಂದ—ಎಲೇ, ರಾಧೆಯ ಬಸುರಿಗೆ ಹೊರೆಯಾದ ನೀಚಾ, ಸೂತಕುಲಾಧಮಾ, ನನ್ನನ್ನು ಹೀಗೆ ಅವಮಾನ ಪಡಿಸುತ್ತೀಯಾ? ಎಂದು ಅಂದನು. ಅದಕ್ಕೆ ಕರ್ಣನು—ನಾನು ಸೂತನಿರಲಿ, ಸೂತಪುತ್ರನಿರಲಿ, ಅದನ್ನೇನು ಮಾಡುತ್ತೀ? ಸತ್ಕುಲದಲ್ಲಿ ಹುಟ್ಟುವದು ದೈವಾಧೀನದ ಮಾತು; ಆದರೆ ಪೌರುಷವು ನನ್ನದಾಗಿದೆ. ಎಂದು ಉತ್ತರವನ್ನು ಕೊಟ್ಟನು. ಅಶ್ವತ್ಥಾಮನು ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ, ಎಲಾ, ನೀಚಾ ಏನಂದಿ? ನನ್ನ ದುಃಖದ ಪ್ರತೀಕಾರವನ್ನು ಶಸ್ತ್ರಗಳಿಂದ ಬಿಟ್ಟು, ಕಣ್ಣೀರುಗಳಿಂದ ಮಾಡಿಕೊಳ್ಳಲಿಯಾ? ನಿನ್ನ ಹಾಗೆ ನನ್ನ ಶಸ್ತ್ರಾಸ್ತ್ರಗಳು ಗುರುಶಾಪದಿಂದ ನಿರ್ವೀರ್ಯವಾಗಿರುವವೆ? ನಿನ್ನಂತೆ ನಾನು ಇದೇ ಈಗ ಹಗೆಗಳಿಗೆ ಬೆನ್ನು ತೋರಿಸಿ ರಣಭೂಮಿಯಿಂದ ಓಡಿ ಬಂದಿರುವೆನೆ? ನಿನ್ನ ಹಾಗೆ ನಾನು ಭಟ್ಟಂಗಿಗಳ ಕುಲದಲ್ಲಿ ಹುಟ್ಟಿರುವೆನೆ? ಎಂದು ಮರ್ಮೋದ್ಘಾಟನ ಮಾಡಿ ಮಾತಾಡಿದನು. ಅದರಿಂದ ಕರ್ಣನಿಗೂ ಕೋಪವು ಹೆಚ್ಚಾಯಿತು. ಎಲಾ ಮೂರ್ಖಾ, ಬ್ರಾಹ್ಮಣರ ಪೋರಾ, ಶಸ್ತ್ರವನ್ನು ಹಿಡಿದಿರುವೆನೆಂದು ಸುಮ್ಮನೆ ಯಾಕೆ ಪೌರುಷವನ್ನು ಕೊಚ್ಚುತ್ತಿರುವೆ? ನಾನೂ ನನ್ನ ಶಸ್ತ್ರಾಸ್ತ್ರಗಳೂ ನಿರ್ವೀರ್ಯವಾಗಿರಲಿ, ಸವೀರ್ಯವಾಗಿರಲಿ, ಪರಾಕ್ರಮಶಾಲಿಯಾದ ನಿನ್ನ ತಂದೆಯಂತೆ ನಾನೇನಾದರೂ ಪಾಂಚಾಲತನಯನಿಗೆ ಹೆದರಿ ಶಸ್ತ್ರವನ್ನು ಚಲ್ಲಿಕೊಟ್ಟಿರುವೆನೇನು? ಎಂದು ಸಿಟ್ಟಿನ ಭರದಲ್ಲಿ ದ್ರೋಣಾಚಾರ್ಯರಂಥ ಅಪ್ರತಿಮ ವೀರರ ಮೇಲೆ ಸುಳ್ಳು ಆರೋಪವನ್ನು ಹೊರಿಸಿ ನಿಂದಿಸಿದನು. ಯಾಕಂದರೆ; ದ್ರೋಣಾಚಾರ್ಯರು ಧೃಷ್ಟದ್ಯುಮ್ನರಿಗೆ ಹೆದರಿದ್ದಿಲ್ಲವೆಂಬ ಸಂಗತಿಯು ಕರ್ಣನಿಗೂ ಗೊತ್ತಿತ್ತು. ಅಶ್ವತ್ಥಾಮನು ತಂದೆಯ ನಿಂದೆಯನ್ನು ಕೇಳಿ ಎಲಾ ಸೂತಕುಲಾಧಮಾ, ರಾಧೆಯ ಬಸುರಿಗೆ ಹೊರೆಯಾದವನೆ, ನನ್ನ ತಂದೆಯನ್ನು ನಿಂದಿಸುತ್ತೀಯಾ? ಅವರು ರಣಭೂಮಿಯಲ್ಲಿ ಏನು ಕೆಲಸ ಮಾಡಿದರೆಂಬದನ್ನು ಈ ಭೂದೇವಿಯು ಬಲ್ಲಳು. ಶಸ್ತ್ರವನ್ನು ಯಾಕೆ ಚಲ್ಲಿಕೊಟ್ಟರೆಂಬ ಬಗ್ಗೆ ಅಜಾತ ಶತ್ರುವಾದ ಧರ್ಮರಾಜನು ಸಾಕ್ಷಿಯಾಗಿರುವನು. ಆದರೆ ಆ ಕಾಲಕ್ಕೆ ರಣಹೇಡಿಯಾದ ನೀನು ಎಲ್ಲಿದ್ದಿಯೋ ಯಾರಿಗೆ ಗೊತ್ತು? ನಮ್ಮ ತಂದೆಯು ದುಃಖದಿಂದಾಗಲಿ ಅಂಜಿಕೆಯಿಂದಾಗಲಿ ಬೇರೆ

ಯಾವ ಕಾರಣದಿಂದಾದರೂ ಆಗಲಿ, ಶಸ್ತ್ರವನ್ನು ಇಟ್ಟಿದ್ದಂತೂ ನಿಜವು. ಆದರೆ ಈಗ ನಾನು, ಭುಜಬಲದ ಸೊಕ್ಕಿನಿಂದ ಉಬ್ಬಿ ಬಡಬಡಿಸುತ್ತಿರುವ ನಿನ್ನನ್ನು ಎಡಗಾಲಿನಿಂದು ಒದೆಯುತ್ತೇನೆ. ಶಕ್ತಿ ಇದ್ದರೆ ತಡೆ, ಎಂದು ಒದೆಯ ಹೋದನು. ಆಗ ಕರ್ಣನು ನೀಚಾ, ನೀನು ಕುಲದಿಂದ ಬ್ರಾಹ್ಮಣನಾಗಿದ್ದು ಕೊಲ್ಲಲಿಕ್ಕೆ ಅಯೋಗ್ಯನಾದ ಕಾರಣ ಒದೆಯಲಿಕ್ಕೆ ಮುಂದೆ ಮಾಡಿದ ಕಾಲನ್ನು ಈ ಕತ್ತಿಯಿಂದ ಕಡಿದುಹಾಕುತ್ತೇನೆಂದುಕತ್ತಿಯನ್ನು ಹಿರಿದನು. ಈಮೇರೆಗೆ ಅವರ ಜಗಳವು ವಿಕೋಪಕ್ಕೆ ಹೋಯಿತು. ಪರಸ್ಪರರಿಗೆ ಕೈಗೆಕೈ ಹತ್ತುವ ಪ್ರಸಂಗವು ಒದಗಿತು. ಕೃಪಾಚಾರ್ಯರೂ ದುರ್ಯೋಧನನೂ ನಡುವೆಯಾಗಿ ಬಿಡಿಸಿದರು. ಕೃಪಾಚಾರ್ಯರು ಅಶ್ವತ್ಥಾಮನನ್ನು ಒತ್ತಟ್ಟಿಗೆ ಕರೆದು ಮಗುವೇ, ಈ ವಾದವನ್ನು ಸಾಕುಮಾಡು. ನಮ್ಮ ಸೈನ್ಯದೊಳಗಿನ ವೀರರಕೂಡ ಹೀಗೆ ಜಗಳಾಡುವದಕ್ಕೆ ಇದು ಸಮಯವಲ್ಲ, ಎಂದು ಅವನನ್ನು ಸಮಾಧಾನಪಡಿಸಿದನು. ಆಗ ಅಶ್ವತ್ಥಾಮನು ನಿರುಪಾಯವಾಗಿ ಎಲ್ಲರೂ ಕೇಳುವಂತೆ ಮಾವಾ, ಹಾಗಾದರೆ ಕೇಳು. ನಿನ್ನ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಈ ನೀಚನು ಶತ್ರುಗಳ ಬಾಣದಿಂದ ರಣಭೂಮಿಯಲ್ಲಿ ಬೀಳುವವರೆಗೆ ಈ ಶಸ್ತ್ರಗಳು ನನಗೆ ಅತ್ಯಂತಪ್ರಿಯಕರವಾದಾಗ್ಯೂ ಅವುಗಳನ್ನು ನಾನು ಈಗ ಚಲ್ಲಿಕೊಡುತ್ತೇನೆ ಎಂದು ಅಂದನು. ಅದಕ್ಕೆ ಕರ್ಣನು ನಕ್ಕು ನಿಮ್ಮಂಥವರು ಶಸ್ತ್ರಗಳನ್ನು ಹಿಡಿದು ಮಾಡುವ ಸಾಹಸವಾದರೂ ಅಷ್ಟೇ ಇರುವದು. ನಾನು ಶಸ್ತ್ರಧಾರಿಯಾಗಿರಲು ಎರಡನೇಯವರ ಶಸ್ತ್ರಗಳಿಂದ ಏನು ಉಪಯೋಗವು. ಮತ್ತು ನನ್ನ ಶಸ್ತ್ರಾಸ್ತ್ರಗಳಿಂದ ಆಗದಕಾರ್ಯವು ಬೇರೆಯಾತರಿಂದ ಆಗುವದು? ಎಂದು ಗರ್ವದಿಂದ ನುಡಿದನು.

ಇತ್ತರಣಭೂಮಿಯಲ್ಲಿ ಭೀಮಸೇನನು ದುಃಶಾಸನನಿಗೆ ಎದುರಾಗಿ ಅವನನ್ನು ಹಣ್ಣಿಗೆ ತಂದನು. ಆ ಕಾಲಕ್ಕೆ ಅವನು ಎಲೈ ಕೌರವ ಸೈನ್ಯದೊಳಗಿನ ಪ್ರಮುಖರಾದ ವೀರರೇ, ಯಾವ ನರಪಶುವು ಪಾಂಚಾಲರಾಜಕನ್ನಿಕೆಯ ಕೇಶಪಾಶಗಳನ್ನು ಹಿಡಿದನೊ, ಯಾವನು ಗುರು ಹಿರಿಯರ ಎದುರಿಗೆ ಅವಳ ವಸ್ತ್ರಗಳನ್ನು ಸೆಳೆದನೊ ಆ ನೀಚನ ವಕ್ಷಸ್ಥಳವನ್ನು ಸೀಳಿ ರಕ್ತವನ್ನು ಕುಡಿಯುವೆನು. ನಿಮ್ಮೊಳಗೆ ಶಕ್ತಿ ಇದ್ದವರು ತಡೆಯಿರಿ ಎಂದು ಗಂಭೀರ ನಾದದಿಂದ ಒದರಿ ಹೇಳಿದನು. ಆಗ ಅಶ್ವತ್ಥಾಮನು ಎಲೈ ಅಂಗರಾಜರೆ, ಈಗ ನಿಮ್ಮ ಶಸ್ತ್ರಾಸ್ತ್ರಗಳ ಬೆಳಕು ಬೀಳಲಿ. ಹಗೆಗಳ ಕೈಯಲ್ಲಿ ಸಿಕ್ಕ ದುಃಶಾಸನನನ್ನು ಬಿಡಿಸಿರಿ. ನೋಡುವಾ. ಎಂದು ಚುಚ್ಚಿ ಮಾತಾಡಿದನು. ಅದಕ್ಕೆ ಕರ್ಣನು ನಾನು ಜೀವದಿಂದ ಇರುವವರೆಗೆ ದುಃಶಾಸನನನ್ನು ಕೊಲ್ಲುವ ಗಂಡಸು ಅದಾವನು? ತಮ್ಮಾ, ದುಃಶಾಸನಾ, ಅಂಜಬೇಡ ಇಗೋ ನಾನು ಬಂದೆನು. ಎಂದು ರಣಭೂಮಿಗೆ ಹೊರಟು ಹೋದನು. ಆ ಬಳಿಕ ಅಶ್ವತ್ಥಾಮನು ರಾಜಾ, ಕೌರವೇಶ್ವರಾ, ಈ ರಾಧೇಯನ ಮೇಲೆ ನಂಬಿಗೆಯನ್ನಿಟ್ಟು ಕೂಡಬೇಡ; ತಮ್ಮನ ಮೇಲೆ ಒದಗಿದ ಸಂಕಟವನ್ನು ದೂರ ಮಾಡುವದಕ್ಕೆ ನೀನು ಸ್ವತಃ ಟೊಂಕಾ ಕಟ್ಟು; ಎಂದು ಹೇಳಿದನು. ದುರ್ಯೋಧನನು ಆ ಮಾತನ್ನು ಕಿವಿಯಮೇಲೆ ಹಾಕಿಕೊಳ್ಳದೆ ತಾನೂ ರಣಭೂಮಿಗೆ ಹೋಗುವದಕ್ಕಾಗಿ ರಥವನ್ನು ತರಹೇಳಿದನು.

# ೫ ನೆಯ ಪ್ರಕರಣ.

## ಕಟ್ಟಕಡೆಯ ಉದ್ಗಾರಗಳು.

ಇತ್ತ ಕರ್ಣ, ದುರ್ಯೋಧನರು ದುಃಶಾಸನನನ್ನು ಬಿಡಿಸುವದಕ್ಕಾಗಿ ಹೋಗುತ್ತಿರಲು, ಅರ್ಜುನನು ಅಣ್ಣನ ಪ್ರತಿಜ್ಞೆಗೆ ಭಂಗಬಂದೀತೆಂದು ಅವರಿಗೆ ಎದುರಾಗಿ ಅಡ್ಡಗಟ್ಟಿದನು. ದುರ್ಯೋಧನನು ಅರ್ಜುನನ ಬಾಣದಿಂದ ರಥದಲ್ಲಿಯೇ ಮೂರ್ಛಿತನಾಗಿ ಬಿದ್ದನು. ಅತ್ತ ಭೀಮಸೇನನು ದುಃಶಾಸನನನ್ನು ನೆಲಕ್ಕೆ ಕೆಡವಿ ತನ್ನ ಪ್ರತಿಜ್ಞೆಯನ್ನು ಪೂರ್ಣಮಾಡುತ್ತಿದ್ದನು. ಅಶ್ವತ್ಥಾಮನು ಅದನ್ನೆಲ್ಲ ಕಂಡು ಮಾವಾ ಏನು ಮಾಡಲಿ? ಆ ನೀಚನಾದ ಭೀಮಸೇನನು ದುಃಶಾಸನನನ್ನು ಕೊಲ್ಲುತ್ತಿರುವನು. ಕರ್ಣನ ಮಾತಿಗೆ ಸಿಟ್ಟಾಗಿ ನಾನು ಶಸ್ತ್ರಗಳನ್ನು ಬಿಟ್ಟುಕೊಟ್ಟೆನು. ಈಗ ನನಗೆ ಎಂಥ ಪಾಪವಾದರೂ ಬರಲಿ. ಘೋರವಾದ ನರಕವು ಸಂಭವಿಸಲಿ. ಚಲ್ಲಿಕೊಟ್ಟ ಶಸ್ತ್ರವನ್ನು ತೆಗೆದುಕೊಂಡು ರಣಭೂಮಿಗೆ ಹೋಗಿ ದುಃಶಾಸನನನ್ನು ಸಂರಕ್ಷಿಸುವೆನು; ಎಂದು ಅಂದನು. ಅಷ್ಟರಲ್ಲಿ ಎಲೈ ಮಹಾತ್ಮನಾದ ಆಚಾರ್ಯಪುತ್ರನೆ, ಎಂದೂ ಸುಳ್ಳಾಡದೆ ಇಂದೇ ಮಾತ್ರ ಈ ಪಾಪಕ್ಕೆ ಗುರಿಯಾಗುವದು ಯೋಗ್ಯವಲ್ಲ. ಎಂಬ ಶಬ್ದಗಳು ಕೇಳಬಂದವು. ಆಗ ಅಶ್ವತ್ಥಾಮನು ಅಯ್ಯೋ! ಎಂಥ ಕಠಿಣ ಪ್ರಸಂಗವಿದು! ನಾನು ಯುದ್ಧಕ್ಕೆ ಹೋಗುವದು ದೇವರ ಮನಸಿಗೆ ಸಹ ಬರಲಿಲ್ಲವೇ? ಅವನು ಸಹ ಪಾಂಡವರ ಪಕ್ಷಪಾತಿಯೇ!! ಮಾವಾ, ನಾನಂತೂ ಕರ್ಣನಮೇಲೆ ಸಿಟ್ಟಾಗಿ ಬಹುದೊಡ್ಡ ತಪ್ಪನ್ನು ಮಾಡಿದೆನು. ನೀವಾದರೂ ರಣಭೂಮಿಗೆ ಹೋಗಿ ದುಃಶಾಸನನ ಸಂರಕ್ಷಣೆಯನ್ನು ಮಾಡಿರಿ. ಎಂದು ಹೇಳಿ ತನ್ನ ಶಿಬಿರಕ್ಕೆ ಹೊರಟು ಹೋದನು. ಇತ್ತ ದುರ್ಯೋಧನನನ್ನು ಅಡ್ಡಗಟ್ಟಿದ ಅರ್ಜುನನು ಅವನ ಮೇಲೆ ಬಾಣದ ಮಳೆಯನ್ನು ಸುರಿಸಿ ಅವನ ಆಟವನ್ನು ಸಾಗಗೊಡಲಿಲ್ಲ. ಭೀಮಸೇನನು ದುಃಶಾಸನನನ್ನು ಕೊಂದು, ಮೈಯನ್ನು ರಕ್ತಮಯಮಾಡಿಕೊಂಡು ನೋಡಿದವರಿಗೆ ಅಂಜಿಕೆ ಬರುವ ಸ್ವರೂಪವನ್ನು ತಾಳಿ ದುರ್ಯೋಧನನನ್ನು ಹುಡುಕುತ್ತ ಬರುತ್ತಿದ್ದನು. ಅವನನ್ನು ಕಂಡು ಕೌರವ ಸೈನಿಕರು ಹೆದರಿ ಕೈಯೊಳಗಿನ ಶಸ್ತ್ರಾಸ್ತ್ರಗಳನ್ನು ಚಲ್ಲಿಕೊಟ್ಟು ದಾರಿ ಸಿಕ್ಕಕಡೆಗೆ ಓಡಿಹೋಗುತ್ತಿದ್ದರು. ದುರ್ಯೋಧನನ ಸಾರಥಿಯು ಅವನನ್ನು ಕಂಡು ಈ ಮದಾಂಧನು ದುಃಶಾಸನನಿಗೆ ಮಾಡಿದ ಅವಸ್ಥೆಯನ್ನೇ ಇವನಿಗೂ ಮಾಡಿಯಾನು ಎಂದು ಆಲೋಚಿಸಿ ಅಲ್ಲಿಯೇ ಸಮೀಪದಲ್ಲಿದ್ದ ಒಂದು ಸರೋವರದ ದಂಡೆಯ ಮೇಲಿದ್ದ ಆಲದ ಮರದ ತಂಪಾದ ನೆರಳಿಗೆ ರಥವನ್ನು ಒಯ್ದು ನಿಲ್ಲಿಸಿದನು. ಅಷ್ಟರಲ್ಲಿ ದುರ್ಯೋಧನನು ಎಚತ್ತು ಎಲಾ, ನನ್ನ ರಥವನ್ನು ಇಲ್ಲಿಗೆ ಯಾರು ತಂದರು? ರಣಭೂಮಿಯಲ್ಲಿ ನನ್ನ ತಮ್ಮನು ಹಗೆಗಳ ಕೈಯಲ್ಲಿ ಸಿಕ್ಕಿರಲು ನಾನು ಇಲ್ಲಿರುವದು ಉಚಿತವೇ? ಬೇಗನೆ ರಥವನ್ನು ನಡಿಸು! ಎಂದು ಸಾರಥಿಗೆ ಆಜ್ಞಾಪಿಸಿದನು.

ಅವನು ರಣಭೂಮಿಯಲ್ಲಿ ನಡೆದ ಸಂಗತಿಯನ್ನು ಯುಕ್ತಿಯಿಂದಲೂ, ವಿನಯದಿಂದಲೂ ಅರುಹಿದನು. ದುರ್ಯೋಧನನು ತಮ್ಮನು ಸತ್ತ ಸುದ್ದಿಯನ್ನು ಕೇಳಿ ನಿಟ್ಟುಸಿರುಬಿಟ್ಟು ಅಯ್ಯೋ! ದೈವವೇ, ಇನ್ನು ನಾನು ಯಾರ ಸಲುವಾಗಿ ಯುದ್ಧಮಾಡಲಿ! ಈ ರಾಜ್ಯವು ಈ ಜಯವು ನನಗೆ ಯಾತಕ್ಕೆ ಬೇಕು? ಎಲಾ ತಮ್ಮಾ, ದುಃಶಾಸನಾ, ನನ್ನ ಮಾತಿನ ಮೇಲೆ ವಿಶ್ವಾಸವಿಟ್ಟು ಪಾಂಡವರ ಕೂಡ ಹಗೆತನವನ್ನು ಬೆಳಿಸಿದೆ. ನಾನು ದುಷ್ಟನು, ನಿನ್ನ ಮನಸಿಗೆ ಬಂದಂತೆ ನಿನಗೆ ನಡೆಯಗೊಡಲಿಲ್ಲ. ನೀನು ಹಗೆಗಳ ಕೈಯಲ್ಲಿ ಸಿಕ್ಕಿರಲು, ನಿನ್ನ ಸಂರಕ್ಷಣೆಯನ್ನು ಮಾಡುವದು ನನ್ನಿಂದಾಗಲಿಲ್ಲ ಎಂದು ಮೂರ್ಛಿತನಾದನು. ಸಾರಥಿಯು ಶೀತೋಪಚಾರಗಳಿಂದ ಅವನನ್ನು ಎಚ್ಚರಿಸಿದನು. ಅಷ್ಟರಲ್ಲಿ ರಣಭೂಮಿಯಿಂದ ಕರ್ಣನ ದೂತನು ದುರ್ಯೋಧನನನ್ನು ಹುಡುಕುತ್ತ ಅಲ್ಲಿಗೆ ಬಂದನು. ಖಿನ್ನನಾದ ಅರಸನು ಆ ದೂತನನ್ನು ಕಂಡು, ನಿಮ್ಮ ಒಡೆಯನಾದ ಕರ್ಣನು ಕ್ಷೇಮದಿಂದಿರುವನೇ? ಎಂದು ಒಳ್ಳೇ ಆತುರದಿಂದ ಕೇಳಿದನು. ಅದಕ್ಕೆ ದೂತನು ದಣಿಯರೇ, ಶರೀರದಿಂದ ಮಾತ್ರ ಕ್ಷೇಮದಿಂದಿರುವನು. ಎಂದು ಹೇಳಿದನು. ಅದನ್ನು ಕೇಳಿ ದುರ್ಯೋಧನನು ದುಃಖದಿಂದ ಎಲಾ, ಇಂಥ ಸಂದಿಗ್ಧವಾದ ಮಾತುಗಳಿಂದ ನನ್ನ ಮನಸ್ಸನ್ನು ಯಾಕೆ ನೋಯಿಸುತ್ತೀ! ಆದದ್ದಾದರೂ ಏನು? ಸ್ಪಷ್ಟವಾಗಿ ವಿವರಿಸಿ ಹೇಳು, ಎಂದು ಅಂದನು. ಆಗ ಆ ದೂತನು ಭೀಮಸೇನನು ದುಃಶಾಸನನನ್ನು ಕೊಂದನು. ಕರ್ಣನು ಅವನ ಮೇಲೆ ಸಿಟ್ಟಾಗಿ ಅವನ ಕೂಡ ಯುದ್ಧಕ್ಕೆ ನಿಂತನು. ಆಗ ಅರ್ಜುನನು ಭೀಮಸೇನನಿಗೂ ನಮ್ಮ ಒಡೆಯನ ಮಗನಾದ ವೃಷಸೇನನು ತನ್ನ ತಂದೆಗೂ ನೆರವಾಗಲಿಕ್ಕೆ ಬಂದರು. ಅರ್ಜುನ ವೃಷಸೇನರಿಗೆ ಒಳ್ಳೇ ನಿಕರದ ಕಾಳಗವೆಸಗಿತು. ಅದರಲ್ಲಿ ವೃಷಸೇನನು ಮರಣ ಹೊಂದಿದನು. ಇತ್ಯಾದಿ ಸಂಗತಿಗಳನ್ನು ದೂತನು ದುರ್ಯೋಧನನ ಮನಸು ಕರಗುವಂತೆ ವರ್ಣಿಸಿ ಹೇಳಿದನು ಆ ಬಳಿಕ ದುರ್ಯೋಧನನು ಬಹಳ ದುಃಖಪಟ್ಟು ಎಲಾ ನಿಮ್ಮ ಒಡೆಯನಾದ ಕರ್ಣನು ಈಗ ಏನು ಮಾಡುತ್ತಿರುವನು? ಎಂದು ಕೇಳಿದನು. ಅದಕ್ಕೆ ಆ ದೂತನು ಮಗನು ಸತ್ತ ದುಃಖದಿಂದ ಕಣ್ಣೀರು ಸುರಿಸಿ ಜೀವದ ಹಂಗು ದೊರೆದು ಅರ್ಜುನನ ಕೂಡ ಯುದ್ಧಮಾಡುವದಕ್ಕಾಗಿ ಒಬ್ಬನೇ ರಣಭೂಮಿಗೆ ಹೊರಡುವ ನಿಶ್ಚಯವನ್ನು ಮಾಡಿದ್ದಾನೆ. ಕಟ್ಟ ಕಡೆಯ ಉದ್ಗಾರಗಳನ್ನು ಈ ಪತ್ರದಲ್ಲಿ ಬರೆದು ದುರ್ಯೋಧನನಿಗೆ ಕೊಟ್ಟು ಬಾ ಎಂದು ನನ್ನನ್ನು ಕಳಿಸಿದ್ದಾನೆ. ಎಂದು ಪತ್ರವನ್ನು ಕೊಟ್ಟನು. ಆ ಪತ್ರದಲ್ಲಿ— "ದುರ್ಯೋಧನ ಮಹಾರಾಜರಿಗೆ ಸ್ವಸ್ತಿ, ಸಮರಾಂಗಣದಿಂದ ಕರ್ಣನು ಮಾಡಿಕೊಳ್ಳುವ ವಿಜ್ಞಾಪನೆಗಳು ಯಾವವೆಂದರೆ —ಶಸ್ತ್ರಾಸ್ತ್ರವಿದ್ಯೆಗಳಲ್ಲಿ ನನ್ನ ಹಾಗೆ ಯಾರೂ ಇಲ್ಲವೆಂತಲೂ ಪಾಂಡವರನ್ನು ನಾನೇ ಕೊಲ್ಲಬಹುದೆಂತಲೂ ನನ್ನ ಮೇಲೆ ನಂಬಿಗೆಯನ್ನು ಇಟ್ಟಿದ್ದಿರಿ. ಆದಾಗ್ಯೂ ದುಃಶಾಸನನನ್ನು ಕೊಂದ ಭೀಮನ ಸೇಡು ತೀರಿಸಿಕೊಳ್ಳುವದು ನನ್ನಿಂದಾಗಲಿಲ್ಲ. ಆದಕಾರಣ ತಾವು ಇನ್ನುಮೇಲೆ ತಮ್ಮ ದುಃಖವನ್ನು ಪರಾಕ್ರಮದಿಂದಾಗಲಿ ಕಣ್ಣೀರಿನಿಂದಾಗಲಿ ನಿವಾರಣೆಮಾಡಿಕೊಳ್ಳಿರಿ, ನನ್ನನ್ನು ನಂಬ

ಬೇಡಿರಿ" ಈ ನಿರಾಶೆಯಿಂದ ಕೂಡಿದ ಕರ್ಣನ ಪತ್ರವನ್ನು ಒಡೆಕೊಂಡು ಬಹಳ ದುಃಖದಿಂದ ದೂತಾ, ಇನ್ನು ಇಲ್ಲಿ ನಿಲ್ಲಬೇಡ. ಬೇಗನೆ ಹೋಗಿ "ದುಃಶಾಸನನು ನನ್ನ ತಮ್ಮನಲ್ಲ, ವೃಷಸೇನನು ನಿನ್ನ ಮಗನಲ್ಲ,ಆದದ್ದಾಗಿಹೋಯಿತು ಪೂರ್ವದಲ್ಲಿ ನಾವಿಬ್ಬರೂ ಸಂಕಲ್ಪಮಾಡಿದಂತೆ ಪಾಂಡವರನ್ನು ಮೊದಲು ನಾಶಗೊಳಿಸೋಣ ರಣಭೂಮಿಯಲ್ಲಿ ಮರಣಹೊಂದಿದ ಬಂಧು ಬಾಂಧವರಿಗೆ ತಿಲಾಂಜಲಿಯನ್ನು ಕೊಡೋಣ. ಆ ಬಳಿಕ ಉಭಯತರು ಕಟ್ಟಿಕಡೆಯ ಭೆಟ್ಟಿಯನ್ನು ತಕ್ಕೊಂಡು ಈ ಶರೀರಗಳನ್ನು ತ್ಯಾಗ ಮಾಡೋಣ" ಎಂದು ನಿಮ್ಮ ಒಡೆಯನಾದ ಕರ್ಣನಿಗೆ ಹೇಳು; ಎಂದು ಅವನನ್ನು ಕಳಿಸಿದನು. ತಾನೂ ಹೊಸ ರಥವನ್ನು ತರಿಸಿ ರಣಭೂಮಿಗೆ ಹೊರಡಲನುವಾದನು. ಅಷ್ಟರಲ್ಲಿ ವೃದ್ಧನಾದ ಧೃತರಾಷ್ಟ್ರನೂ ಗಾಂಧಾರಿಯೂ ದುಃಶಾಸನನು ಸತ್ತನೆಂಬ ಸುದ್ದಿಯನ್ನು ಕೇಳಿ ಸಂಜಯನನ್ನು ಸಂಗಡ ಕರಕೊಂಡು ಇನ್ನಾದರೂ ಯುದ್ಧವನ್ನು ನಿಲ್ಲಿಸಬೇಕೆಂದು ದುರ್ಯೋಧನನಿಗೆ ಕಟ್ಟಕಡೆಯ ನಾಲ್ಕು ಮಾತುಗಳನ್ನು ಉಪದೇಶ ಮಾಡಬೇಕೆಂದು ಅಲ್ಲಿಗೆ ಬಂದರು. ದುರ್ಯೋಧನನು ಅವರನ್ನು ಕಂಡು ಮನಸ್ಸಿನಲ್ಲಿ ನೊಂದುಕೊಂಡು ಇನ್ನು ಈ ಮಾತಾಪಿತೃಗಳಿಗೆ ಹ್ಯಾಗೆ ಮೋರೆಯನ್ನು ತೋರಿಸಲಿ? ಇಂದೇ ಮುಂಜಾನೆ ನಾನೂ ದುಃಶಾಸನನೂ ರಣಭೂಮಿಗೆ ಬರುವಾಗ ನಮಸ್ಕಾರ ಮಾಡಿ ಆಶೀರ್ವಾದವನ್ನು ತಕ್ಕೊಂಡು ಬಂದಿದ್ದೆವು. ಈಗ ದುಃಶಾಸನನು ಎಲ್ಲಿ? ಎಂದು ಅವರು ಕೇಳಿದರೆ—ನಾನು ಏನು ಹೇಳಲಿ! ಎಂದು ಚಿಂತಿಸಿದನು. ಅಷ್ಟರಲ್ಲಿ ಸಂಜಯನು — ಮಹಾರಾಜರು ಇಲ್ಲಿಯೇ ಇರುವರು ಎಂದು ಆ ವೃದ್ಧರ ಕೈಹಿಡಿದು ಕರಕೊಂಡು ಬಂದನು. ದುರ್ಯೋಧನನು ಅವರನ್ನು ಆದರಿಸುವದಂತೂ ಒತ್ತಟ್ಟಿಗಿರಲಿ, ಕಣ್ಣೆತ್ತಿ ಸಹ ನೋಡದೆ ಸುಮ್ಮನೆ ಕುಳಿತಿದ್ದನು.

---

## ೬ನೆಯ ಪ್ರಕರಣ.

### ಪುತ್ರವಾತ್ಸಲ್ಯವೂ ಕ್ಷಾತ್ರತೇಜವೂ.

ಆಗ ವೃದ್ಧರು ಬಾಳಾ, ದುರ್ಯೋಧನಾ, ಎಂದೂ ನಮ್ಮ ಕೂಡ ಹೀಗೆ ಮೌನದಿಂದ ನಡೆದಿಲ್ಲ. ಇಂದೇ ಯಾಕೆ ಸುಮ್ಮನೆ ಇರುವೆ? ಎಂದು ಅಂದರು. ಗಾಂಧಾರಿಯು ಮಗುವೇ, ನೀನು ನಮ್ಮ ಕೂಡ ಮಾತಾಡದಿದ್ದರೆ ದುಃಶಾಸನನ ದುರ್ಮರ್ಷಣರು ಬಂದು ಮಾತಾಡುವರೇ? ಹೀಗೆ ಯಾಕೆ ಮಾಡುತ್ತಿ? ಎಂದು ದುಃಖದಿಂದ ಕಣ್ಣೀರು ಸುರಿಸಹತ್ತಿದಳು. ತಾಯಿಯ ಕರುಣಾಪೂರಿತವಾದ ಉದ್ಗಾರಗಳನ್ನು ಕೇಳಿ ದುರ್ಯೋಧನನಿಗೆ ಸುಮ್ಮನೆ ಕೂಡುವದು ಆಗಲಿಲ್ಲ. ಆಗ ಅವನು ನಾನು ಬಹಳ ಪಾಪಿಷ್ಠನು. ನನ್ನ ನೂರು ಮಂದಿ ತಮ್ಮಂದಿರ ಮರಣವನ್ನು ನಾನು ಕಣ್ಣುಬಿಟ್ಟು ನೋಡುತ್ತಿದ್ದರೂ

ಅವರನ್ನು ಉಳಿಸಿಕೊಳ್ಳುವದು ನನ್ನಿಂದಾಗಲಿಲ್ಲ. ನಿಮ್ಮನ್ನು ಕಣ್ಣೀರು ಸುರಿಸಲಿಕ್ಕೆ ಹಚ್ಚಿದವನು ನಾನೇ. ಇಂಥ ನೀಚನಾದವನಿಗೆ "ಬಾಳಾ, ಬಾಳಾ, ವತ್ಸಾ, ವತ್ಸಾ, ಎಂದು" ಯಾಕೆ ಕರೆಯುತ್ತೀರಿ? ಎಂದು ಅಂದನು. ಗಾಂಧಾರಿಯು ಅವನನ್ನು ಸಮಾಧಾನ ಪಡಿಸುತ್ತ ಮಗನೇ ಈ ದುಃಖವನ್ನು ಸಾಕುಮಾಡು, ಉಳಿದ ನೀನೊಬ್ಬನಾದರೂ ಉದಂಡ ಆಯುಷ್ಯವಂತನಾಗು; ನಿನಗೆ ಕೈಮುಗಿದು ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಈ ಯುದ್ಧವನ್ನು ಮುಗಿಸಿ ಬಿಡು; ಎಂದು ಹೇಳಿದಳು. ಧೃತರಾಷ್ಟ್ರನು ಕಂದಾ ದುರ್ಯೋಧನಾ, ನಿನ್ನ ಹಡೆದವಳ ಮಾತಿಗೆ ಮಾನಕೊಟ್ಟು ನಮ್ಮಿಬ್ಬರನ್ನು ಸಮಾಧಾನಪಡಿಸು; ಯಾಕಂದರೆ ಕಾಲವು ಈಗ ನಮಗೆ ಅನುಕೂಲವಾಗಿಲ್ಲ. ಪರಾಕ್ರಮ ಶಾಲಿಗಳಾದ ಭೀಷ್ಮ ದ್ರೋಣರು ಕೂಡ ಸಂಗ್ರಾಮದಲ್ಲಿ ಮಡಿದು ಹೋದರು. ವೃಷಸೇನನನ್ನು ಅರ್ಜುನನು ಕೊಲ್ಲುತ್ತಿರಲು ಅವನನ್ನುಉಳಿಸಿಕೊಳ್ಳುವದು ಕರ್ಣನಿಗೂ ಕೂಡ ಅಸಾಧ್ಯವಾಯಿತು. ಆ ನೀಚನಾದ ಭೀಮಸೇನನ ಪ್ರತಿಜ್ಞೆಗಳೆಲ್ಲ ಬಹುಶಃ ನೆರವೇರಿದಂತಾಗಿರುವವು. ಕೇವಲ ನಿನ್ನ ಸಂಬಂಧದ ಪ್ರತಿಜ್ಞೆಯೊಂದು ಮಾತ್ರ ಉಳಿದಿರುವದು. ಆದಕಾರಣ ಇನ್ನು ವೈರ ವನ್ನು ಬಿಟ್ಟು ಅಂಧರಾದ ನಮ್ಮ ಸಂರಕ್ಷಣೆಯನ್ನು ಮಾಡು; ಎಂದು ಹೇಳಿದನು. ಸಂಜ ಯನು ಅದರಂತೆಯೇ ಹೇಳಿ ಧೃತರಾಷ್ಟ್ರನ ಮಾತಿಗೆ ಬಲಕೊಟ್ಟನು. ದುರ್ಯೋಧನನು ಶಾಂತಮನಸ್ಸಿನಿಂದ ಎಲ್ಲರ ಮಾತುಗಳನ್ನು ಕೇಳಿಕೊಂಡು ತಂದೆಗಳೇ ಪುತ್ರವಾತ್ಸಲ್ಯ ದಿಂದ ಮೋಹಕ್ಕೊಳಗಾಗಿ ತಾಯಿಯವರು ಹೀಗೆ ಹೇಳುವದು ಯೋಗ್ಯವೇ ಸರಿ. ಸಂಜ ಯನಂತೂ ಹೇಳಿ ಕೇಳಿ, ಗಾವಿಲನು; ಅವನಿಗೆ ರಾಜನೀತಿಯ ವಿಚಾರವು ಎತ್ತಣದು? ರಾಜನೀತಿಯನ್ನು ಬಲ್ಲಂಥ ಹಿರಿಯರಾದ ನೀವು ಸಹ ಮೋಹಕ್ಕೆ ಒಳಗಾದದ್ದನ್ನು ಕಂಡು ನನಗೆ ಬಹಳ ಆಶ್ಚರ್ಯವಾಗುತ್ತದೆ. ನನ್ನ ನೂರು ಮಂದಿ ತಮ್ಮಂದಿರು ಜೀವ ದಿಂದಿರುವಾಗಲೇ ಸ್ವತಃ ವಾಸುದೇವನು ಒಪ್ಪಂದದ ಸಂಧಾನವನ್ನು ಹಚ್ಚಿದಾಗ ನಾನು ಒಪ್ಪಿಕೊಳ್ಳಲಿಲ್ಲ. ಈಗ ಎಲ್ಲ ನನ್ನ ಬಂಧುಬಾಂಧವರೂ ಗುರುಹಿರಿಯರೂ ಗೆಳೆಯರಾದ ಅರಸರೂ ಮರಣಹೊಂದಿರಲು, ಕ್ಷುದ್ರವಾದ ಈ ಶರೀರದ ಮೇಲಿನ ಮಮತೆಗಾಗಿ ಒಪ್ಪಂ ದವನ್ನು ಮಾಡಿಕೊಳ್ಳಲಿಯಾ? ದೊಡ್ಡವರು ನನಗೆ ಹೆಸರಿಡಲಿಕ್ಕಿಲ್ಲವೇ? ಅದರಿಂದ ಪರಿಣಾಮದಲ್ಲಿ ಹಿತವಾದರೂ ಆಗುವದೇ! ಒಂದು ವೇಳೆ ನಿಮ್ಮ ಮಾತಿನಂತೆ ನಡೆದರೆ ಬಲಹೀನನಾದ ನನ್ನ ಕೂಡ ಜಯಶಾಲಿಗಳಾದ ಪಾಂಡವರು ಒಪ್ಪಂದವನ್ನು ಮಾಡಿಕೊ ಳ್ಳುವರೇ? ಈ ಎಲ್ಲ ಸಂಗತಿಗಳನ್ನು ಆಲೋಚಿಸಿ ಹೇಳತಕ್ಕದ್ದನ್ನು ಹೇಳಿರಿ ಅಂದನು ಅದಕ್ಕೆ ಧೃತರಾಷ್ಟ್ರನು ತಮ್ಮಾ ದುರ್ಯೋಧನಾ, ಧರ್ಮರಾಜನು ನಿಮ್ಮ ಮಾತನ್ನು ಮೀರುವನೆಂಬಂತಿಲ್ಲ; ಒಬ್ಬ ತಮ್ಮನು ಮರಣ ಹೊಂದಿದರೆ ಬೆಂಕಿಯಲ್ಲಿ ಹಾರಿಕೊಂಡು ಪ್ರಾಣಬಿಡುವೆನೆಂದು ಅವನು ನಿಶ್ಚಯಿಸಿದ್ದಾನೆ. ಯುದ್ಧದಲ್ಲಿ ಮರಣದ ಸರತಿಯು ಯಾವಾಗ್ಗೆ ಯಾರ ಮೇಲೆ ಬರುವದೆಂಬುದನ್ನು ಯಾರು ಖಂಡಿತವಾಗಿ ಹೇಳುವರು? ಆದ ಕಾರಣ ನೀನು ಒಪ್ಪಂದದ ಮಾತು ತೆಗೆದರೆ ಅದಕ್ಕೆ ಧರ್ಮರಾಜನು ನಿಶ್ಚಯವಾಗಿ

ಸಮ್ಮತಿ ಕೊಡುವನು ಎಂದು ಹೇಳಿದನು. ಅದಕ್ಕೆ ದುರ್ಯೋಧನನು ತಂದೆಗಳೇ, ನೀವೇ ವಿಚಾರಮಾಡಿರಿ. ಧರ್ಮರಾಜನು ಒಬ್ಬ ತಮ್ಮನು ಮರಣಹೊಂದಿದರೆ ಪ್ರಾಣತ್ಯಾಗ ಮಾಡುವದನ್ನು ನಿಶ್ಚಯಿಸಿದ್ದಾನೆ. ಆದರೆ ನನ್ನ ನೂರುಮಂದಿ ತಮ್ಮಂದಿರು ಮರಣಹೊಂದಿರಲು ನಾನು ಜೀವದಿಂದುಳಿದು ದುಃಶಾಸನನ ರಕ್ತವನ್ನು ಕುಡಿದಂಥ ಆ ನೀಚನಾದ ಭೀಮಸೇನನನ್ನು ನನ್ನ ಗದೆಯಿಂದ ಸಂಹರಿಸಿ ಅವನ ರಕ್ತ-ಮಾಂಸಗಳನ್ನು ನಾಲ್ಕು ದಿಕ್ಕಿಗೆ ಈಡಾಡದೆ ಭಿಕ್ಷುಕನಹಾಗೆ ಅತಿ ದೈನ್ಯದಿಂದ ಸಂಧಿಯನ್ನು ಬೇಡಿಕೊಳ್ಳಲಿಯಾ? ಎಂದು ಆವೇಶದಿಂದ ಕೇಳಿದನು. ಅದನ್ನು ಕೇಳಿ ಅವನ ತಾಯಿತಂದೆಗಳಿಗೆ ಬಹಳ ದುಃಖವಾಯಿತು. ಗಾಂಧಾರಿಯು- ಅಯ್ಯೋ ದುರ್ದೈವವೇ, ನಾನು ನೂರುಮಂದಿ ಮಕ್ಕಳನ್ನು ಹಡೆಯಲಿಲ್ಲ. ನೂರು ದುಃಖಗಳನ್ನೇ ಹಡೆದಿರುವೆನು. ಎಂದು ದೊಡ್ಡ ಧ್ವನಿತೆಗೆದು ಅಳಹತ್ತಿದಳು. ಧೃತರಾಷ್ಟ್ರನು ಯುದ್ಧಮಾಡುವ ವಿಷಯದಲ್ಲಿ ಮಗನ ನಿಶ್ಚಯವನ್ನು ಕಂಡು ಮಗನೇ ಶತ್ರುಗಳನ್ನು ಗೆಲ್ಲುವ ಅಪೇಕ್ಷೆಯು ನಿನಗಿದ್ದರೆ ಗುಪ್ತವಾಗಿ ಮೋಸದಿಂದಾದರೂ ಕೊಲ್ಲುವ ಹಂಚಿಕೆಯನ್ನು ತೆಗೆಯಬಾರದೇ? ಎಂದು ಪುತ್ರಮೋಹದಿಂದ ಕ್ಷಾತ್ರಧರ್ಮಕ್ಕೆ ವಿರುದ್ಧವಾಗಿ ಹೇಳಿದನು. ದುರ್ಯೋಧನನಿಗೆ ಆ ಮಾತು ರುಚಿಸಲಿಲ್ಲ. ಕೂಡಲೆ ಅವನು ಪಾಂಡವರು ನನ್ನ ತಮ್ಮಂದಿರನ್ನು ನನ್ನ ಕಣ್ಣೆದುರಿಗೆ ಕೊಂದಿರುವರು. ನಾನು ಮಾತ್ರ ಅವರನ್ನು ಗುಪ್ತವಾಗಿ ಮೋಸದಿಂದ ಕೊಲ್ಲಿಸಿ ಲೋಕಾಪವಾದಕ್ಕೆ ಗುರಿಯಾಗಲಿಯಾ? ಇಂಥ ನೀಚ ಕೆಲಸವನ್ನು ನಾನು ಎಂದೂ ಮಾಡಲಾರೆನು; ಎಂದು ಅಂದನು. ಅಷ್ಟರಲ್ಲಿ ಒಬ್ಬ ದೂತನು ರಣಭೂಮಿಯಿಂದ ಬಂದು ಅರ್ಜುನನು ಕರ್ಣನನ್ನು ಕೊಂದ ಸುದ್ದಿಯನ್ನು ಹೇಳಿದನು. ಆ ಸುದ್ದಿಯನ್ನು ಕೇಳಿದ ಕ್ಷಣವೇ ದುರ್ಯೋಧನನು ಅಯ್ಯೋ ಮಿತ್ರಾ ಕರ್ಣಾ, ಎಂದು ಎಚ್ಚರದಪ್ಪಿ ನೆಲಕ್ಕೆ ಬಿದ್ದನು. ಅಯ್ಯೋ! ದುರ್ದೈವವೇ, ನನ್ನ ಮಗನು ಯಾವನ ಪರಾಕ್ರಮವನ್ನು ನಂಬಿದ್ದನೋ ಅವನು ಸಹ ರಣಭೂಮಿಯಲ್ಲಿ ಮಡಿದನೇ! ಎಂದು ಶೋಕಮಾಡಹತ್ತಿದನು. ಸ್ವಲ್ಪಹೊತ್ತಿನ ಮೇಲೆ ದುರ್ಯೋಧನನು ಎಚ್ಚತ್ತು ಎಲೈ ಅಂಗರಾಜಾ, ಕರ್ಣಾ ನಾನು ಎಂದಾದರೂ ನಿನಗೆ ಅಪ್ರಿಯವಾದದ್ದನ್ನು ಮಾಡಿದ್ದೆನೆ? ನಿನ್ನನ್ನು ಅಗಲಿ ಎಲ್ಲಿಗಾದರೂ ಹೋಗಿದ್ದೆನೆ? ನೀನು ಮಾತ್ರ ಈಗ ನನ್ನನ್ನು ಅಗಲಿ ಎಲ್ಲಿಗೆ ಹೋದೆ! ಎಂದು ಪುನಃ ಮೂರ್ಛಿತನಾದನು.— ಗಾಂಧಾರಿಯು ಅವನನ್ನು ಎಚ್ಚರಿಸ ತೊಡಗಿದಳು. ಎಚ್ಚತ್ತ ಬಳಿಕ ದುರ್ಯೋಧನನು ನನ್ನನ್ನು ಯಾಕೆ ಎಚ್ಚರಿಸಿದಿರಿ! ನನ್ನ ಮಿತ್ರನಾದ ಕರ್ಣನು ಮೃತಪಟ್ಟಮೇಲೆ ಅವನ ಹಿಂದೆ ನಾನು ಉಸುರಾಡಿಸುವದು ಕೂಡ ನಾಚಿಕೆಯು ಮಾತಾಗಿದೆ. ಅವನನ್ನು ಕೊಂದಂಥಾ ಅರ್ಜುನನನ್ನು ಯಮಲೋಕಕ್ಕೆ ಅಟ್ಟುವದಕ್ಕಾಗಿಯೇ ಬದುಕಬೇಕಲ್ಲದೆ ಬೇರೆ ಯಾವ ಉದ್ದೇಶವೂ ಇಲ್ಲ. ಎಂದು ಶೋಕ ಮಾಡಹತ್ತಿದನು. ಧೃತರಾಷ್ಟ್ರನಿಗೆ ಮಗನು ಯುದ್ಧದ ಹವ್ಯಾಸವನ್ನು ಬಿಡುವದಿಲ್ಲೆಂಬದು ಪೂರ್ಣವಾಗಿ ಗೊತ್ತಾಯಿತು. ಆಗ ಅವನು ಉಪಾಯಗಾಣದೆ ವತ್ಸಾ, ಯುದ್ಧ ಮಾಡು

ವದೇ ನಿನ್ನ ಮನಸ್ಸಿನ ನಿಶ್ಚಯವಾಗಿದ್ದರೆ ಶಲ್ಯನಿಗಾಗಲಿ ಅಶ್ವತ್ಥಾಮನಿಗಾಗಲಿ ಸೇನಾಪತಿಯ ಪಟ್ಟವನ್ನು ಕಟ್ಟು ಎಂದು ಹೇಳಿದನು. ಅದಕ್ಕೆ ದುರ್ಯೋಧನನು ಯಾರಿಗೆ ಪಟ್ಟಗಟ್ಟಿ ಏನು ಪ್ರಯೋಜನವು! ಕರ್ಣನು ಸತ್ತ ದುಃಖದಿಂದ ಹುಟ್ಟಿದ ಅಶ್ರುಜಲಗಳಿಂದ ಸೇನಾಪತಿಯ ಪಟ್ಟಕ್ಕೆ ನನ್ನ ಅಭಿಷೇಕವನ್ನು ನಾನೇ ಮಾಡಿಕೊಂಡಿದ್ದೇನೆ. ಇನ್ನುಮೇಲೆ ನಾನು ಆ ಪಾರ್ಥನನ್ನು ಕೊಲ್ಲುವೆನು. ಇಲ್ಲವೆ ಸ್ವರ್ಗಕ್ಕೆ ಹೋಗಿ ಕರ್ಣನನ್ನು ಕಾಣುವೆನು. ಎಂದು ತನ್ನ ಗದೆಯನ್ನು ತಕ್ಕೊಂಡು ಸಿದ್ಧವಾದ ರಥವನ್ನು ಏರಿ ರಣಭೂಮಿಗೆ ಹೊರಡಲನುವಾದನು.

---

## ೭ನೆಯ ಪ್ರಕರಣ.

### ದುರಾಗ್ರಹ

ಅದೇ ಸಮಯದಲ್ಲಿ ಭೀಮಾರ್ಜುನರು ಒಂದೇ ರಥದಲ್ಲಿ ಕುಳಿತುಕೊಂಡು, ದುರ್ಯೋಧನನನ್ನು ಹುಡುಕುತ್ತ ಅಲ್ಲಿಗೆ ಬಂದರು. ಕೋಮಲ ಮನಸಿನ ಅರ್ಜುನನು ಧೃತರಾಷ್ಟ್ರನನ್ನೂ ಗಾಂಧಾರಿಯನ್ನೂ ಕಂಡು, ಅಣ್ಣಾ, ಇಲ್ಲಿ ಪುತ್ರಶೋಕದಿಂದ ದುಃಖಿತರಾದ ವೃದ್ಧರು ಇರುವರು; ನಮ್ಮನ್ನು ಕಂಡು ಅವರಿಗೆ ಮತ್ತಿಷ್ಟು ದುಃಖವಾದೀತು. ಆದಕಾರಣ ನಾವು ಇಲ್ಲಿಂದ ತಿರುಗಿ ಹೋಗುವದು ಒಳ್ಳೇದು ಎಂದು ಹೇಳಿದನು. ಅದಕ್ಕೆ ಭೀಮಸೇನನು—ತಮ್ಮಾ, ನಿನಗೆ ಶಿಷ್ಟಸಾಂಪ್ರದಾಯವು ಗೊತ್ತಿಲ್ಲ; ಹಿರಿಯರನ್ನು ಕಂಡು ಕಾಣದೆ ಹೋಗಬಾರದು; ಅವರಿಗೆ ಭೆಟ್ಟಿಯಾಗಿ ನಾವು ಯಾರು? ಏನು? ಎಂಬದನ್ನು ಹೇಳಿ, ನಮಸ್ಕಾರಮಾಡಿ ಹೋಗೋಣ ನಡೆ. ಎಂದು ಹೇಳಿದನು. ಅಣ್ಣನ ಮಾತಿಗೆ ಅರ್ಜುನನು ಒಪ್ಪಿಕೊಂಡನು; ಉಭಯತರೂ ರಥವನ್ನು ಇಳಿದು ಬಂದು, ಅರ್ಜುನನು ಮುಂದೆ ಹೋಗಿ,—ಹಿರಿಯರೇ, ಶತ್ರುಗಳನ್ನು ಗೆಲ್ಲುವ ವಿಷಯದಲ್ಲಿ ನಿಮ್ಮ ಹಿರಿಯ ಮಗನು ಯಾವಾತನನ್ನು ನಂಬಿದ್ದನೋ, ಯಾವಾತನು ತನ್ನ ಪರಾಕ್ರಮದ ಸೊಕ್ಕಿನಿಂದ ಭೀಷ್ಮದ್ರೋಣರನ್ನು ಕೂಡ ತೃಣಕ್ಕೆ ಬಗೆಯುತ್ತಿದ್ದನೋ, ಆ ರಾಧೇಯನಾದ ಕರ್ಣನನ್ನು ರಣರಂಗದಲ್ಲಿ ಸೋಲಿಸಿ ಕೊಂದಂಥ ಪಾರ್ಥನು ನಮಸ್ಕರಿಸುತ್ತಾನೆ. ಎಂದು ಹೇಳಿ ನೆಲಮುಟ್ಟಿ ನಮಸ್ಕಾರಮಾಡಿದನು. ಆ ಬಳಿಕ ಭೀಮಸೇನನೂ ಹಾಗೇಮಾಡಿ ಹಿರಿಯರೆ, ಯಾವನು ರಣಭೂಮಿಯಲ್ಲಿ ನೂರುಮಂದಿ ಕೌರವರನ್ನು ಸೋಲಿಸಿದನೋ, ಯಾವನು ದುಃಶಾಸನ ಎದೆಯನ್ನು ಸೀಳಿ ರಕ್ತವನ್ನು ಹೀರಿದನೋ, ಮತ್ತು ಯಾವಾತನು ಈಗ ತನ್ನ ಗದೆಯ ಹೊಡತದಿಂದ ದುರ್ಯೋಧನನ ತೊಡೆಗಳನ್ನು ಸೀಳಿ ಪುಡಿ ಪುಡಿ ಮಾಡಬೇಕೆಂದು ಇಲ್ಲಿಗೆ ಬಂದಿರುವನೋ ಆ ಭೀಮಸೇನನೂ ತಮಗೆ ನಮಸ್ಕರಿಸುತ್ತಾನೆ. ಎಂದು ಹೇಳಿದನು. ಈ ಮಾತು ಧೃತರಾಷ್ಟ್ರನ ಮನಸಿಗೆ ಹತ್ತಿತು. ಕೂಡಲೆ ಅವನು

ಸಿಟ್ಟಾಗಿ,—ಎಲಾ, ನೀಚಾ ಟೊಣಪಾ, ವೃಕೋದರಾ, ವ್ಯರ್ಥವಾಗಿ ಯಾಕೆ ಬಡಬಡಿಸುತ್ತೀ? ಲೋಕದಲ್ಲಿ ನೀನೊಬ್ಬನೇ ಶೂರನೇನು? ಯುದ್ಧದಲ್ಲಿ ಜಯಪಡೆಯುವದು, ಅಥವಾ ಮರಣ ಹೊಂದುವದು ಕ್ಷತ್ರಿಯರ ಕರ್ತವ್ಯಗಳು. ಅಂದಮೇಲೆ ನಿನಗೇಕೆ ಇಷು ಒಣ ಹೆಮ್ಮೆಯು? ಎಂದು ಜರಿಯಲು, ಭೀಮಸೇನನು ಶಾಂತಮನಸಿನಿಂದ—ಮಹಾರಾಜರೆ, ನಾನು ಈಗ ಆತ್ಮಪೌರುಷದಿಂದ ಅಥವಾ ಹೆಮ್ಮೆಯಿಂದ ಈ ಮಾತುಗಳನ್ನು ಆಡುವದಿಲ್ಲ. ಆದರೆ ನೆರೆದ ಸಭೆಯಲ್ಲಿ ಯಾವ ಯಾವ ಅರಸರು ಪಾಂಡವರ ಹೆಂಡತಿಯಾದ ದ್ರೌಪತಿಯನ್ನು ತುರುಬು ಹಿಡಿದು ಎಳೆದು ತಂದು ಮಾನಭಂಗ ಮಾಡಿಸಿದರೋ ಅವರೆಲ್ಲರೂ ನನ್ನ ಸಿಟ್ಟೆಂಬ ಬೆಂಕಿಗೆ ಆಹುತಿಯಾದರು. ಅಂದಿನ ಸಭೆಯಲ್ಲಿ ನೀವು ಇದ್ದಿರಾದಕಾರಣ ನಿಮ್ಮ ಮುಂದೆ ಈ ಮಾತುಗಳನ್ನು ಆಡಬೇಕಾಯಿತು. ಎಂದು ಅಂದನು. ಅದಕ್ಕೆ ದುರ್ಯೋಧನು ಸಿಟ್ಟಾಗಿ ತನ್ನ ಗದೆಯನ್ನು ಅವನ ತಲೆಯ ಮೇಲೆ ಹಾಕಹೋದನು. ಭೀಮನೂ ಅವನ ಮೇಲೆ ಏರಿ ಹೋದನು. ಉಭಯತರಿಗೂ ಕೈಗೆ ಕೈಹತ್ತುವ ಪ್ರಸಂಗವು ಒದಗಿತು. ಧೃತರಾಷ್ಟ್ರನು ದುರ್ಯೋಧನನ ಕೈಹಿಡಿದು ಕೂಡ್ರಿಸಿಕೊಂಡನು. ಇತ್ತ ಅರ್ಜುನನೂ ಭೀಮಸೇನನನ್ನು ತಡೆದು, ಅಣ್ಣಾ, ಇದು ಸಮಯವಲ್ಲ; ಎಂದು ಹೇಳಿ ಸಮಾಧಾನಪಡಿಸಿದನು ಅಷ್ಟರಲ್ಲಿ ಶತ್ರುಗಳ ಸಂಗಡ ಸೂರ್ಯನಾರಾಯಣನೂ ಅಸ್ತವಾಗುವದನ್ನು ಕಂಡು, ಧರ್ಮರಾಜನು ಎಲ್ಲ ಸೈನಿಕರಿಗೂ ಯುದ್ಧವನ್ನು ನಿಲ್ಲಿಸಬೇಕೆಂದು ಅಪ್ಪಣೆಮಾಡಿದನು. ಅದನ್ನು ಕೇಳಿ ಭೀಮಾರ್ಜುನರು ಹೊರಟು ಹೋದರು.

ಅದೇ ಕಾಲಕ್ಕೆ ತಂದೆಯ ಕೊಲೆಯಿಂದ ತಲೆತಿರುಗಿದವನಾದ ಅಶ್ವತ್ಥಾಮನು ಕರ್ಣನು ಸತ್ತ ಸುದ್ದಿಯನ್ನು ಕೇಳಿ ಬಿಲ್ಲು ಬಾಣಗಳಿಂದ ಸಜ್ಜಾಗಿ, ವೈರಿಗಳ ಸೇಡು ತೀರಿಸಿಕೊಳ್ಳಬೇಕೆಂದು ಹೊರಟು ಬರುತ್ತಿದ್ದನು. ಆಗ ಅವನು—ಎಲೈ ಗಾಂಡೀವಧನುಷ್ಯವನ್ನು ಹಿಡಿದ ಅರ್ಜುನನೆ, ನಾನು ಕರ್ಣನ ಮೇಲೆ ಸಿಟ್ಟಾಗಿ, ಶಸ್ತ್ರಗಳನ್ನು ಬಿಟ್ಟ ಸಮಯದಲ್ಲಿ ರಣಭೂಮಿಯು ನಿರ್ವೀರ್ಯವಾದದ್ದನ್ನು ಕಂಡು, ಜಯ ಪಡೆದೆನೆಂದು ಪೌರುಷವನ್ನು ಕೊಚ್ಚುವೆಯಾ? ಇಗೋ ಪ್ರಳಯಕಾಲದ ಅಗ್ನಿಯಂತೆ ಸಿಟ್ಟಿನಿಂದ ಉರಿಯುತ್ತಿರುವ ಈ ಅಶ್ವತ್ಥಾಮನ ಮುಂದೆ ನಿಮ್ಮ ಪರಾಕ್ರಮವು ಹೊರಬೀಳಲಿ. ಒಂದು ಕ್ಷಣಮಾತ್ರದಲ್ಲಿ ನಿಮ್ಮೆಲ್ಲರನ್ನೂ ಆ ದುಷ್ಟ ಪಾಂಚಾಲಿ ತನಯನನ್ನೂ ಮಣ್ಣುಗೂಡಿಸುವೆನು. ಎಂದು ಗರ್ಜನೆ ಮಾಡುತ್ತ ಬರುತ್ತಿದ್ದನು. ಅದನ್ನು ಕಂಡು ಧೃತರಾಷ್ಟ್ರನಿಗೆ ಸ್ವಲ್ಪ ಸಮಾಧಾನವಾಯಿತು. ಕೂಡಲೆ ಅವನು—ಅಪ್ಪಾ, ದುರ್ಯೋಧನಾ, ಪರಾಕ್ರಮದಲ್ಲಿ ತಂದೆಯನ್ನು ಕೂಡ ಮೀರಿದ ಅಶ್ವತ್ಥಾಮನು ಬರುತ್ತಿರುವನು; ಅವನನ್ನು ಆದರಿಸು. ಎಂದು. ಹೇಳಿದನು. ಆದರೆ ಅವನ ವಿಷಯವಾಗಿ ದುರ್ಯೋಧನನ ಮನಸು ನೆಟ್ಟಗಿದ್ದಿಲ್ಲವಾದ ಕಾರಣ. ಅವನು—ತಂದೆಗಳೆ, ಈ ಅಶ್ವತ್ಥಾಮನು. ತನ್ನ ಶೌರ್ಯ, ತಾರುಣ್ಯ, ಶಸ್ತ್ರಾಸ್ತ್ರವಿದ್ಯೆಗಳ ಕೌಶಲ್ಯ ಇವುಗಳ ಬಗ್ಗೆ ಸುಳ್ಳೇ ಅಭಿಮಾನವನ್ನು ಹೊಂದಿರುತ್ತಾನೆ. ಈತನು ಕರ್ಣನ ಮರಣವನ್ನೇ ನಿರೀಕ್ಷಿಸುತ್ತ ಕುಳಿತಿದ್ದನು. ಇಂಥವನಿಂದ ನಮ್ಮ ಹಿತವೇನಾಗು

ವದು? ಇವನ ಮೋರೆಯನ್ನು ಸಹ ನಾನು ನೋಡಲಾರೆನು. ಎಂದು ಮಾತಾಡುತ್ತಿರುವಷ್ಟರಲ್ಲಿ ಅಶ್ವತ್ಥಾಮನು ಅಲ್ಲಿಗೇ ಬಂದು—ರಾಜಾ, ಕೌರವೇಶ್ವರಾ, "ನಿನಗೆ ವಿಜಯವಾಗಲಿ" ಅಂದನು. ಅದಕ್ಕೆ ದುರ್ಯೋಧನನು ಬಾಹ್ಯೋಪಚಾರದ ಪೂರ್ತೆ ಎದ್ದು ನಿಂತು "ಬಾ, ಆಚಾರ್ಯಪುತ್ರಾ ಇತ್ತ ಬಾ. ಕೂಡ್ರು. ಎಂದು ಕೂಡ್ರಿಸಿಕೊಂಡನು. ತರುವಾಯ ಅಶ್ವತ್ಥಾಮನು—ರಾಜಾ, ಆ ರಾಧೇಯನು ಬಂಟತನದ ದೊಡ್ಡದೊಡ್ಡ ಮಾತುಗನ್ನಾಡಿ ಏನು ಬೆಳಕು ಕೆಡವಿದನೆಂಬದು ಎಲ್ಲರಿಗೂ ಗೊತ್ತುಂಟು. ಈಗ ನಾನು ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಬಂದಿದ್ದೇನೆ. ಇನ್ನುಮೇಲೆ ಹಗೆಗಳು ನಾಶ ಹೊಂದಿದರೆಂದು ತಿಳಿ. ಮನಸಿನೊಳಗಿನ ಚಿಂತೆಯನ್ನು ಬಿಡು. ಎಂದು ಹೇಳಿದನು. ಈ ಮಾತು ದುರ್ಯೋಧನನಿಗೆ ರುಚಿಸಲಿಲ್ಲ. ಅವನು ಅಶ್ವತ್ಥಾಮನನ್ನು ಕುರಿತು—ಆಚಾರ್ಯಪುತ್ರಾ, ಇಷ್ಟು ಅವಸರವೇಕೆ? ಹ್ಯಾಗಾದರೂ ನೀನು ಕರ್ಣನ ಮರಣದ ದಾರೀ ನೋಡುತ್ತಿದ್ದೆ. ಅದೇ ಪ್ರಕಾರ ನಾನೊಬ್ಬನು ಸಾಯುವ ವರೆಗೆ ಸುಮ್ಮನಿರು; ಆ ಮೇಲೆ ಬೇಕಾದರೆ ವೈರಿಗಳಿಗೆ ನಿನ್ನ ಪರಾಕ್ರಮವನ್ನು ತೋರಿಸು. ಯಾಕಂದರೆ ಕರ್ಣನೂ ನಾನೂ ಬೇರೆಯಲ್ಲ. ಎಂದು ಅಂದನು. ಅಶ್ವತ್ಥಾಮನು ದುರ್ಯೋಧನನ ಮನಸ್ಸಿನಲ್ಲಿಯ ಕರ್ಣನ ವಿಷಯವಾಗಿ ಇದ್ದ ಅಭಿಮಾನವನ್ನೂ ತನ್ನ ಬಗ್ಗೆ ಇದ್ದ ತಿರಸ್ಕಾರವನ್ನೂ ಅರಿತು, ಬಹಳ ಅಸಮಾಧಾನಪಟ್ಟು, ಒಳ್ಳೇದು ರಾಜಾ ಹಾಗೇ ಆಗಲಿ. ಎಂದು ಹೇಳಿ ಭರ್ರನೆ ತಿರುಗಿ ಒಳ್ಳೇ ಆವೇಶದಿಂದ ಕಾಲು ಅಪ್ಪಳಿಸುತ್ತ ಹೊರಟು ಹೋದನು. ಅಲ್ಲಿಯೇ ಸಮೀಪದಲ್ಲಿ ಕುಳಿತಿದ್ದ ಧೃತರಾಷ್ಟ್ರ ಗಾಂಧಾರಿ ಇವರಿಗೆ ಕುಶಲ ಪ್ರಶ್ನವನ್ನು ಕೇಳುವದಂತೂ ಒತ್ತಟ್ಟಿಗಿರಲಿ ಅವರನ್ನು ಕಣ್ಣೆತ್ತಿ ಸಹ ನೋಡಲಿಲ್ಲ. ಪ್ರಿಯವಾಚಕರೇ, ಸಿಟ್ಟಿನ ಮಹಿಮೆಯನ್ನು ನೋಡಿರಿ. ಇದನ್ನೆಲ್ಲ ನೋಡಿ ಆ ವೃದ್ಧರ ಮನಸಿಗೆ ಬಹಳ ಅಸಮಾಧಾನವಾಯಿತು. ಆಗ ಧೃತರಾಷ್ಟ್ರನು ಅಶ್ವತ್ಥಾಮನಿಗೆ ಕೆಲವು ಮಾತುಗಳನ್ನು ಹೇಳಿ ಅವನನ್ನು ಸಮಾಧಾನಪಡಿಸಿ ಬಾ. ಎಂದು ಸಂಜಯನನ್ನು ಅವನ ಬಳಿಗೆ ಕಳಿಸಿದನು. ಆ ಮಾತುಗಳು ಯಾವವೆಂದರೆ:—

"ಬಾಳಾ ಅಶ್ವತ್ಥಾಮಾ, ಸುಯೋಧನನೂ ನೀನೂ ಬಾಲಸ್ನೇಹಿತರು; ನೀವಿಬ್ಬರೂ ನನ್ನ ತೊಡೆಯಮೇಲೆ ಕೂತು ಆಡಿರುವಿರಿ. ನೂರು ಮಂದಿ ತಮ್ಮಂದಿರೂ ಮಡಿದರೆಂಬ ದಾರುಣವಾದ ದುಃಖದಿಂದಲೂ, ಕರ್ಣನ ಮೇಲಿನ ಪ್ರೇಮದಿಂದಲೂ ಸುಯೋಧನನು ನಿನಗೆ ಕೆಟ್ಟ ಮಾತುಗಳನ್ನು ಆಡಿದನು. ಅವುಗಳನ್ನು ನೀನು ಬಹಳಹೊತ್ತು ಮನಸ್ಸಿನಲ್ಲಿ ಹಿಡಿಯಬೇಡ. ರಣಭೂಮಿಯಲ್ಲಿ ನಿನ್ನ ತಂದೆಗೆ ಆದ ಅವಮಾನವನ್ನು ಸ್ಮರಿಸು. ಆ ಬಳಿಕ ನಿನ್ನ ಪರಾಕ್ರಮ, ಪೌರುಷಗಳಿಗೆ ತಕ್ಕಂತೆ ಏನು ಮಾಡತಕ್ಕದ್ದನ್ನು ಮಾಡು"

---

(ಮುಂದಿನ ಪ್ರಕರಣದಲ್ಲಿ ಭೀಮ ದುರ್ಯೋಧನರಿಗೆ ಆದ ಗದಾಯುದ್ಧವು ವರ್ಣಿಸಲ್ಪಡುವದು)

# ೮ನೆಯ ಪ್ರಕರಣ.

## ಗದಾಯುದ್ಧವು.

ಮರುದಿವಸ ದುರ್ಯೋಧನನು ತನ್ನ ಉಳಿದ ಸೈನ್ಯವನ್ನೆಲ್ಲ ಒಟ್ಟುಗೂಡಿಸಿ ಶಲ್ಯನಿಗೆ ಸೇನಾಧಿಪತ್ಯವನ್ನು ಕೊಟ್ಟು, ಪುನಃ ಯುದ್ಧವನ್ನು ಹೂಡಿದನು. ಕಾಳಗವು ಒಳ್ಳೇ ರಂಗಿಗೆ ಬಂತು. ಧರ್ಮರಾಜನು ಶಲ್ಯನನ್ನು ಕೊಂದು ಹಾಕಿದನು. ಎಂದಿನಂತೆ ಕುರು ಸೈನ್ಯವು ದಾರಿ ಸಿಕ್ಕಕಡೆಗೆ ಓಡಹತ್ತಿತು. ಕೃಪ ಅಶ್ವತ್ಥಾಮ ಕೃತವರ್ಮ ಈ ಮೂವರೇ ವೀರರು ರಣಭೂಮಿಯಲ್ಲಿ ಉಳಿದರು. ಭೀಮಸೇನನು ಇಂದು ಸಾಯಂಕಾಲದೊಳಗಾಗಿ ದುರ್ಯೋಧನನನ್ನು ಕೊಲ್ಲುವೆನು, ಇಲ್ಲವೆ ಅಗ್ನಿಕುಂಡದಲ್ಲಿ ಹಾರಿಕೊಳ್ಳುವೆನು ಎಂದು ಪ್ರತಿಜ್ಞೆಮಾಡಿದನು. ಅವನ್ನು ತಿಳಿದು ದುರ್ಯೋಧನನು ಓಡಿ ಹೋಗಿ ಎಲ್ಲಿಯೋ ಅಡಗಿಕೊಂಡನು. ಅದರಿಂದ ಧರ್ಮರಾಜನು ಚಿಂತೆಮಾಡಹತ್ತಿದನು. ಮತ್ತು ಅವನನ್ನು ಹುಡುಕುವದಕ್ಕಾಗಿ ನಾಲ್ಕೂಕಡೆಗೆ ಚಾರರನ್ನು ಕಳಿಸಿದನು. ಇತ್ತ ಶ್ರೀಕೃಷ್ಣನೂ ಭೀಮಾರ್ಜುನರನ್ನು ಕರಕೊಂಡು ರಣಭೂಮಿಯ ಸುತ್ತುಮುತ್ತು ಶೋಧಮಾಡಹತ್ತಿದನು. ಮೂವರು ಹುಡುಕಿ ಹುಡುಕಿ ಬೇಸತ್ತು ನಿರಾಶೆಯುಳ್ಳವರಾದರು. ಅರ್ಜುನನು ನಿಟ್ಟುಸಿರು ಬಿಟ್ಟು ಸುಮ್ಮನೆ ಕುಳಿತುಕೊಂಡನು ಅಷ್ಟರಲ್ಲಿ ಭೀಮಸೇನನ ಗುರುತಿನವನೊಬ್ಬ ಮನುಷ್ಯನು ತಲೆಯಮೇಲೆ ಮಾಂಸದ ಹೊರೆಯನ್ನು ಹೊತ್ತುಕೊಂಡು, ತೇಕುತ್ತ ಬರುತ್ತಿದ್ದನು. ಅವನ ವಸ್ತ್ರಗಳೂ ಕಾಲುಗಳೂ ಆದೇ ಕೊಯ್ದ ಚಿಗರೆಯ ರಕ್ತದಿಂದ ಕೆಂಪಾಗಿದ್ದವು. ಅವನು ಅಸ್ಪಷ್ಟವಾದ ಧ್ವನಿಯಿಂದ— ಒಡೆಯರೆ, ಇಲ್ಲಿಯೇ ಸಮೀಪದಲ್ಲಿ ಒಂದು ಸರೋವರವಿರುವದು; ಅದರ ದಂಡೆಯ ಪ್ರದೇಶವು ಬಹಳ ವಿಸ್ತಾರವಾಗಿರುವದು; ಅಲ್ಲಿ ಇಬ್ಬರು ಗೃಹಸ್ಥರು ಹೋಗಿರುವರು. ಅವರ ಹೆಜ್ಜೆಗಳು ಮೂಡಿರುವವು. ಆದರೆ ಅಲ್ಲಿಂದ ತಿರುಗಿಬರುವಾಗ ಒಬ್ಬನ ಹೆಜ್ಜೆಗಳು ಮಾತ್ರ ಮೂಡಿರುವವು. ನಾನು ನೋಡಿದ ಸಂಗತಿಗಳನ್ನು ತಮಗೆ ಹೇಳಿದೆನು. ಮುಂದೆ ತಮ್ಮ ಇಚ್ಛೆಗೆ ಬಂದಂತೆ ಮಾಡಬೇಕು ಎಂದು ಹೇಳಿದನು. ದುರ್ಯೋಧನನಿಗೆ ಜಲಸ್ತಂಭಿನೀ ವಿದ್ಯೆಯು ಬರುತ್ತದೆ ಎಂಬದು ಶ್ರೀಕೃಷ್ಣನಿಗೆ ಗೊತ್ತಿತ್ತು. ಆದರಿಂದ ಅವನು ದುರ್ಯೋಧನನು ನಿಜವಾಗಿ ಸರೋವರದಲ್ಲಿ ಅಡಗಿಕೊಂಡಿರಬಹುದೆಂದು ಊಹಿಸಿದನು. ಆ ಬಳಿಕ ಅವರು ಮೂವರು ಒಳ್ಳೇ ಉಲ್ಲಾಸದಿಂದ ಆ ಸರೋವರದ ಬಳಿಗೆ ಹೋಗಿ ನೋಡಲು ಅಲ್ಲಿ ಮೂಡಿದ ಹೆಜ್ಜೆಗಳು ದುರ್ಯೋಧನನವೇ ಎಂಬದು ನಿಶ್ಚಯವಾಯಿತು. ಕೂಡಲೆ ಭೀಮಸೇನನು ಆ ಸರೋವರದೊಳಗಿನ ಮೀನಮೊಸಳೆ ಮೊದಲಾದ ಜಲಚರಗಳಿಗೆ ತೊಂದರೆಯಾಗುವಂತೆ ನೀರನ್ನು ಕದಡಿದನು. ಮತ್ತು ದುರ್ಯೋಧನನನ್ನು ಉದ್ದೇಶಿಸಿ— ಎಲಾ,

ಭರತಕುಲಕಲಂಕಾ, ಇನ್ನೂ ಕೈಯಲ್ಲಿ ಶಸ್ತ್ರವನ್ನು ಹಿಡಿದಿರುವೆ! ದುಃಶಾಸನನನ್ನು ಕೊಂದಂಥ ನಾನು ಕಡುಹಗೆ ಎಂದು ತಿಳಿಯುತ್ತಿರುವೆ; ಮಧುಕೈಟಭರೇ ಮೊದಲಾದ ದೈತ್ಯರನ್ನು ಸಂಹರಿಸಿದ ಶ್ರೀಹರಿಯು ಕೂಡ ಮದಾಂಧನಾಗಿ ಉದ್ಧಾಮತನದಿಂದ ವರ್ತಿಸುತ್ತಿರುವೆ; ಹೀಗಿದ್ದರೂ ಈಗ ನನಗೆ ಹೆದರಿ ಕೆಸರಿನಲ್ಲಿ ಅಡಗಿಕೊಳ್ಳಲಿಕ್ಕೆ ನಾಚಿಕೆ ಬರುವದಿಲ್ಲವೆ? ನಿನಗೆ ಧಿಕ್ಕಾರವಿರಲಿ! ಎಲೈ ನರಪಶುವೆ, ನಿಷ್ಕಲಂಕವಾದ ಚಂದ್ರವಂಶಕ್ಕೆ ನಿನ್ನಿಂದ ದೋಷವು ತಟ್ಟುವದಿಲ್ಲವೆ? ನಿನ್ನ ಕಣ್ಣಮುಂದೆಯೇ ನಿನ್ನ ಸೂರುಮಂದಿ ತಮ್ಮಂದಿರನ್ನೂ ಕೊಂದುಹಾಕಿ ಪಾಂಚಾಲಿಯ ಸಿಟ್ಟೆಂಬ ಬೆಂಕಿಯನ್ನು ನಂದಿಸಿದೆನು. ಹೀಗಿರಲು ನಿನ್ನ ಅಭಿಮಾನವು ನಷ್ಟವಾಗಲಿಕ್ಕೆ ಕಾರಣವೇನು! ಈಗಿನಂತೆ ಇದಕ್ಕೂ ಮೊದಲಾದರೂ ಅಭಿಮಾನವನ್ನು ಬಿಟ್ಟಿದ್ದರೆ ಉಪಯೋಗವಾಗುತ್ತಿದ್ದಿಲ್ಲವೆ? ಎಂದು ಚುಚ್ಚಿಚುಚ್ಚಿ ಗರ್ಜನೆಮಾಡಿ ಮಾತಾಡುತ್ತಿದ್ದನು. ಆದರೂ ದುರ್ಯೋಧನನು ಸರೋವರದೊಳಗಿಂದ ಹೊರಬೀಳಲಿಲ್ಲ. ಭೀಮಸೇನನು ಒಳ್ಳೇ ಆವೇಶಗೊಂಡು, ತನ್ನ ಗದೆಯನ್ನು ತಕ್ಕೊಂಡು ಮಂದರಪರ್ವತದಿಂದ ಸಮುದ್ರವನ್ನು ಕಡೆದಂತೆ ಆ ಸರೋವರದ ನೀರನ್ನು ಒಳ್ಳೇ ಭರದಿಂದ ಕಡೆಯಹತ್ತಿದನು. ಅದರಿಂದ ಅದರೊಳಗಿಂದ ಜಲಚರಗಳು ಉಕ್ಕಿ ಹೊರಸೂಸುವ ನೀರಿನ ಸಂಗಡ ಹೊರಬಿದ್ದು ಪ್ರಾಣಬಿಡಹತ್ತಿದವು ಸಮುದ್ರಮಥನದಿಂದ ಕಾಲಕೂಟ ವಿಷವು ಹೊರಬಿದ್ದಂತೆ ದುರ್ಯೋಧನನು ಹೊರಬಿದ್ದನು. ತರುವಾಯ ಅವನು ಎಲಾ ಮೂರ್ಖಾ, ವಾಯುಪುತ್ರಾ ಯಾಕೆ ಸುಮ್ಮನೆ ಗಳಹುತ್ತೀ, ನಾನು ನಿನಗೆ ಹೆದರಿ ಈ ಸರೋವರದಲ್ಲಿ ಅಡಗಿಕೊಂಡಿದ್ದೆನೆಂದು ತಿಳಿಯಬೇಡ; ಇನ್ನೂ ನನ್ನಿಂದ ಪಾಂಡವರನ್ನು ಕೊಲ್ಲುವದಾಗಲಿಲ್ಲೆಂದು ನಾಚಿಕೆಪಟ್ಟು ವಿಶ್ರಾಂತಿಯ ಸಲುವಾಗಿ ಸ್ವಲ್ಪಹೊತ್ತು ಪಾತಾಳಲೋಕದಲ್ಲಿ ಹೋಗಿ ಕುಳಿತುಕೊಂಡಿದ್ದೆನು; ಎಂದು ಅಂದನು. ಆಗ ಶ್ರೀಕೃಷ್ಣನು ಅದು ಹ್ಯಾಗೇ ಇರಲಿ, ನೀನು ಭೀಮನ ಸಂಗಡ ಗದಾಯುದ್ಧವನ್ನು ಮಾಡಿದರೆ ಮಾತ್ರ ನಿಜವಾದ ಕ್ಷತ್ರಿಯನು ಎಂದು ಅನ್ನಲು, ದುರ್ಯೋಧನನು ಮೇಲೆ ಬಂದು ತನ್ನ ಗದೆಯನ್ನು ನೆಲದಮೇಲೆ ಇಟು ರಣಭೂಮಿಯ ಕಡೆಗೆ ನೋಡಿದನು. ಅಲ್ಲಿ ಕೌರವಪಕ್ಷದ ಜನರು ಯಾರೂ ಇದ್ದಿಲ್ಲ. ಅಸಂಖ್ಯ ಹೆಣಗಳು ರಾಶಿರಾಶಿಯಾಗಿ ಬಿದ್ದಿದ್ದವು. ಪಾಂಡವರ ಪಕ್ಷದ ವೀರರು ಸಿಂಹನಾದವನ್ನು ಮಾಡುತ್ತಿದ್ದರು. ಇದನ್ನೆಲ್ಲ ಕಂಡು ಅವನಿಗೆ ಬಹಳ ದುಃಖವಾಯಿತು. ಕೂಡಲೆ ಅವನು ಒಮ್ಮೆ ನಿಟ್ಟುಸಿರು ಬಿಟ್ಟನು. ಅದನ್ನು ಕಂಡು ಭೀಮಸೇನನು— ಎಲೈ ಕೌರವನೆ, ಪಾಂಡವರು ಸಬಾಂಧವರಾಗಿದ್ದು ನನ್ನ ಬಂಧುಬಾಂಧವರೆಲ್ಲ ತೀರಿಕೊಂಡರೆಂದು ಮನಸಿನಲ್ಲಿ ವ್ಯಸನಪಡಬೇಡ: ನಮ್ಮ ಅಯ್ವರಲ್ಲಿ ಬೇಕಾದವರೊಡನೆ ಯುದ್ಧಮಾಡು ಎಂದು ಹೇಳಿದನು. ಈ ಮಾತು ಕೇಳಿ ದುರ್ಯೋಧನನು ಕಣ್ಣೀರು ತಂದು ಭೀಮಸೇನನನ್ನು ನೋಡಿ— ಭೀಮಾ, ಕರ್ಣದುಃಶಾಸನರನ್ನು ಕೊಂದ ನೀವಿಬ್ಬರೂ ನನಗೆ ಸರಿಯಾದ ಶತ್ರುಗಳು; ನಿಮ್ಮಿಬ್ಬರ ಸೇಡನ್ನು, ನಾನು ತೀರಿಸಿಕೊಳ್ಳಬೇಕಾಗಿದೆ. ಇದಲ್ಲದೆ ನಿಮ್ಮೆಲ್ಲರಲ್ಲಿ ನೀನೇ ನಿಜವಾದ ಸಾಹಸಿಗನು; ನಿನ್ನ

ಕೂಡವೇ ನನ್ನ ಹಗೆತನವು. ಈ ಬಗೆಯಾಗಿ ನೀನು ನನಗೆ ಅಪ್ರಿಯನಾಗಿದ್ದರೂ, ನಿನ್ನ ಸಾಹಸವನ್ನು ಕಂಡು ನಿನ್ನ ಕೂಡವೇ ಯುದ್ಧಮಾಡಬೇಕೆಂದು ಮನಸಾಗುತ್ತದೆ. ಎಂದು ಅಂದನು. ಆ ಬಳಿಕ ಉಭಯತರು ತಮ್ಮ ತಮ್ಮ ಗದೆಗಳನ್ನು ತಕ್ಕೊಂಡು, ದ್ವಂದ್ವ ಯುದ್ಧಕ್ಕೆ ಸನ್ನದ್ಧರಾದರು. ಮೊದಮೊದಲು ಅವರು ಪರಸ್ಪರರನ್ನು ಮೂದಲಿಸಿ ಹೊಡ ದಾಡಿದರು. ಆಬಳಿಕ ಗದೆಗಳಿಂದ ಒಬ್ಬರಮೇಲೊಬ್ಬರು ಪೆಟ್ಟುಹಾಕಲಾರಂಭಿಸಿದರು. ಉಭಯತರೂ ಗದಾಯುದ್ಧದಲ್ಲಿ ಕುಶಲರು; ಆದಾಗ್ಯೂ ಭೀಮನಲ್ಲಿ ಶಕ್ತಿಸಾಹಸಗಳೂ. ದುರ್ಯೋಧನನಲ್ಲಿ ಕೌಶಲ್ಯವೂ ಮಿಗಿಲಾಗಿದ್ದವು. ಅವರಿಬ್ಬರೂ ತಮ್ಮ ತಮ್ಮ ಬುದ್ಧಿ ಚಾತುರ್ಯವನ್ನು ಉಪಯೋಗಿಸಿ ಒಳ್ಳೇ ಚಟುವಟಿಕೆಯಿಂದ ನಾನಾವಿಧವಾಗಿ ಗದೆಯನ್ನು ತಿರುವುತ್ತಿದ್ದರು. ಅವರನ್ನು ಕಂಡು, ಪ್ರೇಕ್ಷಕರು ತಟಸ್ಥರಾಗಿ ನಿಂತು ನೋಡುತ್ತ ಅಚ್ಚರಿಬಡುತ್ತಿದ್ದರು.

ಇತ್ತ ಧರ್ಮರಾಜನು ದುರ್ಯೋಧನನು ಸಿಕ್ಕನೋ ಇಲ್ಲವೋ ಎಂದು ಚಿಂತಿಸುತ್ತ ತನ್ನ ಸಿಬಿರದಲ್ಲಿ ಕುಳಿತಿದ್ದನು. ಅಷ್ಟರಲ್ಲಿ ಅವನು ಕಳಿಸಿದ ಒಬ್ಬ ಚಾರನು ಬಂದು, ಶ್ರೀಕೃಷ್ಣನು ಹೇಳಿದಮೇರೆಗೆ ಎಲ್ಲ ವೃತ್ತಾಂತವನ್ನು ವಿವರಿಸಿ ಹೇಳಿದನು. ಆಗ ಧರ್ಮರಾ ಜನು ಭಾರತಯುದ್ಧವು ಮುಗಿದು ಪಾಂಡವರು ಜಯಶಾಲಿಗಳಾಗುವರೆಂದೂ, ದ್ರೌಪ ದಿಯು ಇನ್ನು ಮೇಲೆ ತನ್ನ 'ವೇಣೀಬಂಧನ' ಸಮಾರಂಭವು ನೆರವೇರುವದೆಂದೂ ಹರ್ಷಭರಿತರಾದರು. ಮತ್ತು ಈ ಆನಂದವನ್ನು ಲೋಕಕ್ಕೆ ತಿಳಿಯಪಡಿಸುವದಕ್ಕಾಗಿ ಶ್ರೀ ಕೃಷ್ಣನ ಅಪ್ಪಣೆಯ ಪ್ರಕಾರ ನಾಲ್ಕೂಕಡೆಗೆ ಮಂಗಲ ಸಮಾರಂಭಗಳು ನಡೆಯಬೇಕೆಂದು ಆಜ್ಞಾಪಿಸಿದನು. ಆ ಬಳಿಕ ಧರ್ಮರಾಜನೂ, ದ್ರೌಪದಿಯೂ ಗದಾಯುದ್ಧದ ಪರಿಣಾ ಮವನ್ನು ಕುರಿತು ಮಾತಾಡುತ್ತ ಕುಳಿತುಕೊಂಡರು. ದ್ರೌಪದಿಯು ಸ್ತ್ರೀ ಸ್ವಭಾವಕ್ಕನು ಸರಿಸಿ ಮನಸಿನ ಕೋಮಲತೆಯಿಂದ ಜಯದ ಬಗ್ಗೆ ಸಂಶಯಗೊಂಡು, ತಾಯಿ ಜಗದಂಬೆ, ನನ್ನ ಪ್ರಾಣನಾಥರಿಗೆ ಜಯವನ್ನು ಕೊಟ್ಟು, ಕಾಪಾಡಮ್ಮಾ ಎಂದು ಕೈಮುಗಿದು ಅನನ್ಯ ಭಾವದಿಂದ ಬೇಡಿಕೊಂಡಳು.

---

## ೯ನೆಯ ಪ್ರಕರಣ.

### ಕಪಟ ಬ್ರಾಹ್ಮಣನು

ಹಿಂದಿನ ಪ್ರಕರಣದಲ್ಲಿ ಹೇಳಿದ ಮೇರೆಗೆ ಧರ್ಮರಾಜನೂ ದ್ರೌಪದಿಯೂ ಸಿಬಿರದಲ್ಲಿ ಮಾತನಾಡುತ್ತ ಕುಳಿರಲು, ಥೋರಮಗ್ಗಲು, ಯಾರೋ ಆರ್ತಸ್ವರದಿಂದ— ಧರ್ಮಾತ್ಮರುಗಳಿರಾ, ನಾನು ವೃದ್ಧಬ್ರಾಹ್ಮಣನು; ನೀರಡಿಕೆಯಿಂದ ಬಳಲುತ್ತೇನೆ. ಕುಡಿ ಯುವದಕ್ಕೆ ಸ್ವಲ್ಪ ನೀರು ಕೊಡಿರಿ ಎಂದು ಒದರುವ ಧ್ವನಿಯು ಕೇಳಬಂತು ನಿಜವಾಗಿ

ಅವನು ದುರ್ಯೋಧನನ ಮಿತ್ರನಾದ ಚಾರ್ವಾಕನೆಂಬ ರಾಕ್ಷಸನು. ಏನಾದರೂ ಕಪಟವನ್ನು ಮಾಡಿ, ಪಾಂಡವರನ್ನು ಸಂಕಟದಲ್ಲಿ ಕೆಡವಬೇಕೆಂಬ ದುರ್ಬುದ್ಧಿಯಿಂದ ಬ್ರಾಹ್ಮಣನ ವೇಷವನ್ನು ತಾಳಿ, ಧರ್ಮರಾಜನಿದ್ದಲ್ಲಿಗೆ ಬಂದಿದ್ದನು. ಧರ್ಮರಾಜನು ಅವನನ್ನು ಸೇವಕರಿಂದ ಒಳಗೆ ಕರೆಯಿಸಿಕೊಂಡು, ಆಸನಾದಿ ಉಪಚಾರಗಳಿಂದ ಅತಿಥಿ ಸತ್ಕಾರವನ್ನು ಮಾಡಿ, ಸುಗಂಧವೂ ಶೀತಲವೂ ಆದ ನೀರನ್ನೂ ಉಪಹಾರವನ್ನೂ ತರಿಸಿ ಮುಂದೆ ಇಡಿಸಿ ಸ್ವೀಕರಿಸಬೇಕೆಂದು ಕೈಮುಗಿದು ಬಿನ್ನವಿಸಿದನು. ಆಗ ಬ್ರಾಹ್ಮಣನು ಉಪಹಾರದ ಜೇನಸನ್ನು ತಕ್ಕೊಂಡು ಮುರಿದು ಬಾಯಲ್ಲಿ ಇಡತಕ್ಕವನು; ಅಷ್ಟರಲ್ಲಿ ಏನೋ ನೆನಪಾದವನಂತೆ ನಟಿಸಿ ಆ ಜೇನಸನ್ನು ಅಲ್ಲಿಯೇ ಇಟ್ಟು, ಒಹೋ! ನೀವು ಕ್ಷತ್ರಿಯರಲ್ಲವೆ? ಈಗ ರಣಭೂಮಿಯಲ್ಲಿ ನಿತ್ಯದಲ್ಲಿಯೂ ನಿಮ್ಮ ಆಪ್ತರಿಷ್ಟರು ಸಾವಿರಗಟ್ಟಲೆಯಾಗಿ ಮರಣಹೊಂದುತ್ತಿರುವರು. ಅದರಿಂದ ನಿಮಗೆ ಅಶೌಚವಿರುವದು. ನಾನು ಈ ಆಲದಗಿಡದ ತಂಪಾದ ನೆರಳಿನಲ್ಲಿಯೇ ಸ್ವಲ್ಪಹೊತ್ತು ಕುಳಿತು ವಿಶ್ರಾಂತಿಯನ್ನು ತಕ್ಕೊಂಡು, ನನ್ನ ನೀರಡಿಕೆಯನ್ನು ಕಳಕೊಳ್ಳುವೆನು. ಎಂದು ಹೇಳಿದನು. ಧರ್ಮರಾಜನೂ ದ್ರೌಪದಿಯೂ ಅತಿಥಿ ಸತ್ಕಾರವು ಸರಿಯಾಗಿ ಆಗಲಿಲ್ಲೆಂದು ಹಳಹಳಿಸಿದರು. ಬ್ರಾಹ್ಮಣನು ಮನಸಿಗೆ ಹಚ್ಚಿಕೊಳ್ಳಬೇಡಿರೆಂದು ಉಪಚಾರದ ಮಾತುಗಳನ್ನು ಆಡಿದನು. ತರುವಾಯ ಧರ್ಮರಾಜನು—ಎಲೈ ವಿಪ್ರಶ್ರೇಷ್ಠರೆ, ಈಗ ನೀವು ಎಲ್ಲಿಂದ ಬಂದಿರಿ? ಇಷ್ಟ್ಯಾಕೆ ದಣಿದಿರುವಿರಿ? ಎಂದು ಕೇಳಿದನು. ಅದಕ್ಕೆ ಆ ಬ್ರಾಹ್ಮಣನು—ನಾವು ವೇದಾಧ್ಯಯನದಲ್ಲಿ ಕಾಲಕಳೆಯುವ ಬ್ರಾಹ್ಮಣರು. ನಮ್ಮಂಥವರಿಗೆ ಈ ಯುದ್ಧ ಮೊದಲಾದ ಚಮತ್ಕಾರಗಳನ್ನು ನೋಡುವದರಲ್ಲಿ ಕೌತುಕವೆನಿಸುವದು ಸ್ವಾಭಾವಿಕವು. ನಾನು ಈಗ ನಡೆದಿರುವ ಕ್ಷತ್ರಿಯರ ಘೋರ ಸಂಗ್ರಾಮವನ್ನು ನೋಡುತ್ತ ಸಮಂತಪಂಚಕದ ಸುತ್ತಲು ತಿರುಗಾಡುತ್ತಿರುವೆನು. ಇಂದು ಮಧ್ಯಾಹ್ನದ ಬಿಸಲಿನ ತಾಪದಿಂದ ಕಂಗೆಟ್ಟು ನೀರಡಿಸಿ ಒಳ್ಳೇ ಭರಕ್ಕೆ ಬಂದ ಅರ್ಜುನ ಸುಯೋಧನರ ಗಧಾಯುದ್ಧವನ್ನು ನೋಡುವದನ್ನು ಅಷ್ಟಕ್ಕೇ ಬಿಟ್ಟು ಇಲ್ಲಿಗೆ ಬಂದೆನು. ಎಂದು ಹೇಳಿದನು. ಅರ್ಜುನ ಸುಯೋಧನರ ಗಧಾಯುದ್ಧವೆಂದ ಕೂಡಲೆ ಅಲ್ಲಿ ಕುಳಿತವರೆಲ್ಲರೂ ಒಮ್ಮೆಲೆ ಗಾಬರಿಯಾಗಿ ಒಬ್ಬರಿಗೊಬ್ಬರು ಮಿಕಿಮಿಕಿ ಮೋರೆ ನೋಡ ಹತ್ತಿದರು. ಅಲ್ಲಿಯೇ ನಿಂತುಕೊಂಡಿದ್ದ ಒಬ್ಬ ಸೇವಕನು ಎಲೈ ವಿಪ್ರಶ್ರೇಷ್ಠರೆ ಹೀಗೇಕೆ ಅನ್ನುತ್ತೀರಿ? ಭೀಮ ದುರ್ಯೋಧನರ ಗದಾಯುದ್ಧವೆಂದು ಅನ್ನಿರಿ. ಅಂದನು. ಈ ಮಾತಿಗೆ ಬ್ರಾಹ್ಮಣನ ಬಾಯಿಂದ ಏನು ಉತ್ತರವು ಹೊರಡುವದೆಂಬದನ್ನು ಧರ್ಮರಾಜನೂ ದ್ರೌಪದಿಯೂ ಒಳ್ಳೇ ಆತುರದಿಂದ ನೋಡುತ್ತಿದ್ದರು. ಅದನ್ನು ಕಂಡು ಕಪಟ ಬ್ರಾಹ್ಮಣನು ಭೀಮ ದುರ್ಯೋಧನರ ಯುದ್ಧವು ಆಗಲೇ ಮುಗಿದು ಹೋಗಿರುವದು. ಭೀಮನ ಮಾತು ಇನ್ನು ಯಾತಕ್ಕೆ? ಎಂದು ಅಂದನು. ಆ ಮಾತು ಕಿವಿಗೆ ಬಿದ್ದಾಕ್ಷಣವೇ ಧರ್ಮರಾಜನೂ ದ್ರೌಪದಿಯೂ ಮೂರ್ಛಿತರಾದರು. ಅದನ್ನು ಕಂಡು ಆ ಚಾರ್ವಾಕನು

ಮನಸ್ಸಿನಲ್ಲಿಯೇ ಸಂತೋಷಪಡುತ್ತ ಈಗ ಮೂರ್ಛೆ ಹೋದವರು ಯಾರೆಂಬದನ್ನು ಸೇವ ಕರಿಂದ ಕೇಳಿಕೊಂಡು, ಅಹಹ! ಪ್ರಮಾದವಾಯಿತು. ನಾನು ನಿಷ್ಕಾರಣವಾಗಿ ಇವರಿಗೆ ದುಃಖವನ್ನುಂಟು ಮಾಡಿದೆನು. ಎಂದು ಹೊರಹೊರಗೆ ದುಃಖವನ್ನೂ ಸಹಾನುಭೂತಿ ಯನ್ನೂ ತೋರಿಸಿದನು. ಸ್ವಲ್ಪ ಹೊತ್ತಿನಮೇಲೆ ಧರ್ಮರಾಜನೂ ದ್ರೌಪದಿಯೂ ಚೇತ ರಿಸಿಕೊಂಡರು. ಧರ್ಮರಾಜನು — ಎಲೈ ಬ್ರಾಹ್ಮಣಶ್ರೇಷ್ಠರೇ, ನಡೆದ ವೃತ್ತಾಂತವನ್ನು ಸಾದ್ಯಂತವಾಗಿ ಹೇಳಿರಿ. ಎಂದು ದೈನ್ಯದಿಂದ ಬಿನ್ನವಿಸಿದನು. ಆಗ ಕಪಟಿಯಾದ ಬ್ರಾ ಹ್ಮಣನು:—ಎಲೈ ರಾಜನೆ, ನೀನು ಧರ್ಮರಾಜನೆಂತಲೂ ಈ ಸಾಧ್ವಿಯು ದ್ರೌಪದಿಯೆಂತ ಲೂ ನನಗೆ ಮೊದಲೇ ಗೊತ್ತಾಗಿದ್ದರೆ ನಾನು ಇಲ್ಲಿಗೆ ಬರುತ್ತಿದ್ದಿಲ್ಲ. ಉಪಾಯವಿಲ್ಲ. ಆದ ಮಾತಿಗೆ ಮರುಗಿ ಫಲವೇನು? ನೀವು ಕೇಳುತ್ತೀರೆಂದ ಬಳಿಕ ಗದಾಯುದ್ಧದ ಸಂಕ್ಷಿಪ್ತ ವೃತ್ತಾಂತವನ್ನು ಹೇಳುವೆನು ಕೇಳಿರಿ. ಮೊದಲು ಭೀಮ ದುರ್ಯೋಧನರ ಗದಾ ಯುದ್ಧವು ಒಳ್ಳೇ ಭರಕ್ಕೆ ಬಂತು. ಅಷ್ಟರಲ್ಲಿ ಗದಾಯುದ್ಧ ಕುಶಲನಾದ ಬಲರಾಮನು ಅಲ್ಲಿಗೆ ಬಂದನು. ಭೀಮನಿಗಿಂತ ದುರ್ಯೋಧನನ ಮೇಲೆ ಅವನ ಪ್ರೀತಿಯು ಹೆಚ್ಚೆಂಬದು ನಿಮಗೆ ಗೊತ್ತುಂಟು. ಈ ಸಮಯದಲ್ಲಿ ಅವನು ಭೀಮನಿಗೆ ಗೊತ್ತಾಗದಂತೆ ದುರ್ಯೋ ಧನನಿಗೆ ಕೆಲವು ಪೇಚುಗಳನ್ನು ಸಂಕೇತದಿಂದ ತಿಳಿಸಿದನು. ದುರ್ಯೋಧನನು ಅವನ ಇಂಗಿತವನ್ನು ತಿಳಿದು, ಭೀಮನ ಮೇಲೆ ಗದೆಯ ಪೆಟ್ಟನ್ನು ಹಾಕಲು, ಅವನು ಕೂಡಲೆ ನೆಲಕ್ಕೆ ಬಿದ್ದು ಪ್ರಾಣಬಿಟ್ಟನು. ಎಂದು ಸುಳ್ಳು ಸಂಗತಿಯನ್ನು ಕಲ್ಪಿಸಿಕೊಂಡು ಅದು ಸಂಭವನೀಯವಾಗಿ ತೋರುವಂತೆ ಹೊಂದಿಸಿ ಹೇಳಿದನು. ಈ ಮಾತಿನಿಂದ ಭಯಂಕರ ಪರಿಣಾಮವಾಯಿತು. ಧರ್ಮರಾಜನೂ ದ್ರೌಪದಿಯೂ ಪುನಃ ಮೂರ್ಛಿತರಾದರು. ಸೇವಕರು ಅವರನ್ನು ಎಚ್ಚರಿಸಿದರು. ತರುವಾಯ ದ್ರೌಪದಿಯು—ಹಾ! ನಾಥಾ, ಭೀ ಮಸೇನಾ, ನನ್ನ ಅಪಮಾನದ ಸೇಡು ತೀರಿಸಿಕೊಳ್ಳುವದರಲ್ಲಿ ಪ್ರಾಣಕ್ಕೆ ಎರವಾದಿರಾ? ಹಿಂದಕ್ಕೆ ಬಕ, ಹಿಡಿಂಬ, ಕಿರ್ಮೀರ, ಕೀಚಕ, ಜರಾಸಂಧ ಮೊದಲಾದವರನ್ನು ಕೊಂದ ಸಾಮರ್ಥ್ಯವು ಎಲ್ಲಿ ಹೋಯಿತು? ಪ್ರಾಣದೊಡೆಯರೇ ಆ ನೀಚನಾದ ದುಃಶಾಸನ ನನ್ನು ಕೊಂದ ಮೇಲೆ ಒಮ್ಮೆಯಾದರೂ ದರ್ಶನ ಕೊಡಬಾರದೆ? ಹಗೆಗಳನ್ನು ಕೊಂದ ಬಳಿಕ ಅವರ ರಕ್ತದಿಂದ ತುಂಬಿದ ಕೈಗಳಿಂದ ನಿನ್ನ ಹೆಳಲನ್ನು ಹಾಕುತ್ತೇನೆಂದು ಪ್ರತಿಜ್ಞೆ ಯನ್ನು ಮಾಡಿದ್ದಿರಲ್ಲ! ಕ್ಷತ್ರಿಯರು ಹೀಗೆ ಪ್ರತಿಜ್ಞಾಭಂಗವನ್ನು ಮಾಡುವರೆ? ಅಥವಾ ನಿಲ್ಲಿರಿ, ನಿಲ್ಲಿರಿ! ನಾನೇ ನಿಮ್ಮ ಬಳಿಗೆ ಬರುತ್ತೇನೆ. ಹೆಳಲು ಹಾಕಿ ಪ್ರತಿಜ್ಞೆಯನ್ನು ಪೂರ್ಣ ಮಾಡುವಿರಂತೆ. ಎಂದು ಮತ್ತೆ ಮೂರ್ಛಿತಳಾದಳು. ದಾಸಿಯು ಅವಳನ್ನು ಎಚ್ಚರಿಸಿ ದಳು. ಧರ್ಮರಾಜನು— ವಿಪ್ರವರ್ಯರೆ, ಮುಂದೇನಾಯಿತು? ಎಂದು ಕೇಳಿದನು. ಅದಕ್ಕೆ ಆ ಬ್ರಾಹ್ಮಣನು ಸುಳ್ಳೇ ಶೋಕ ಮಾಡುವವನಂತೆ ನಟಿಸಿ, ರಾಜಾ, ಮುಂದಿನ ಸಂಗತಿಯನ್ನು ಏನೆಂದು ಹೇಳಲಿ? ಭೀಮನು ಪರಲೋಕಕ್ಕೆ ತೆರಳಿದ ಕೂಡಲೆ, ಅರ್ಜು ನನು ಗಾಂಡೀವ ಧನುಷ್ಯವನ್ನು ನೆಲಕ್ಕೆ ಚಲ್ಲಿಕೊಟ್ಟು ದುಃಖದಿಂದ ಅಳಹತ್ತಿದನು. ಆಗ

ದುರ್ಯೋಧನನು ಅವನಿಗೆ ಕೆಲವು ನಿಷ್ಠುರ ಮಾತುಗಳನ್ನು ಆಡಿದನು. ಅವನು ಅವುಗಳನ್ನು ಸಹಿಸದೆ, ಭೀಮನ ಕೈಯೊಳಗಿನ ರಕ್ತಮಯವಾದ ಗದೆಯನ್ನು ತಕ್ಕೊಂಡು ದುರ್ಯೋಧನನ ಮೈಮೇಲೆ ಏರಿಹೋದನು. ಉಭಯತರೂ ಒಳ್ಳೇ ನಿಕರದಿಂದ ಹೋರಾಡುತ್ತಿರಲು ಈ ಯುದ್ಧದಲ್ಲಿ ಅರ್ಜುನನಿಗೆ ಯಶದೊರೆಯುವದು ಅಸಂಭವವೆಂತಲೂ ಅರ್ಜುನನ ಮೇಲೆ ಒಂದು ವೇಳೆ ಭಯಂಕರ ಪ್ರಸಂಗವು ಒದಗಿದರೆ ಶ್ರೀಕೃಷ್ಣನಿಗೆ ಬಹಳ ದುಃಖವಾಗುವದೆಂತಲೂ ಭಾವಿಸಿ ಬಲರಾಮನು ಜುಲುಮೆಯಿಂದ ಶ್ರೀಕೃಷ್ಣನನ್ನು ತನ್ನ ರಥದಲ್ಲಿ ಕೂಡ್ರಿಸಿಕೊಂಡು ದ್ವಾರಕೆಗೆ ಹೋದನು. ಎಂದು ಹೇಳಿ ಸುಮ್ಮನಾದನು. ಇದರಿಂದ ಧರ್ಮರಾಜನ ಮನಸ್ಸು ಅರ್ಜುನನ ಜಯದ ವಿಷಯವಾಗಿ ಸಂಶಯಗೊಂಡಿತು. ಹಾಗು ಅವನಾದರೂ ಭೀಮಸೇನನ ಗತಿಯನ್ನೇ ಹೊಂದುವನೆಂದು ನಿಶ್ಚಯಿಸಿ ಉಭಯತರನ್ನೂ ನೆನೆನೆನಿಸಿ ಪ್ರಳಾಪಿಸಹತ್ತಿದನು. ದ್ರೌಪದಿಯೂ ಅದನ್ನು ಕೇಳಿ ದುಃಖಾತಿಶಯದಿಂದ ಅಗ್ನಿಪ್ರವೇಶ ಮಾಡುವದನ್ನು ನಿಶ್ಚಯಿಸಿ ಚಿತೆಯನ್ನು ಸಿದ್ಧಮಾಡುವದಕ್ಕಾಗಿ ಸೇವಕರಿಗೆ ಅಜ್ಞಾಪಿಸಿದಳು. ಮತ್ತು ಧರ್ಮರಾಜನನ್ನು ಕುರಿತು— ಮಹಾರಾಜರೇ, ಯಾವ ನೀಚನು ಭೀಮಸೇನನ ಪ್ರಾಣವನ್ನು ಹರಣ ಮಾಡಿದನೋ ಅವನ ಸೇಡು ತೀರಿಸಿಕೊಳ್ಳದೆ ಬಿಡಬೇಡಿರಿ. ಎಂದು ಹೇಳಿದಳು. ಅದಕ್ಕೆ ಧರ್ಮರಾಜನು ಪ್ರಿಯೇ ಇನ್ನು ಸೇಡು ತೀರಿಸಿಕೊಂಡು ಏನು ಮಾಡುವದದೆ? ನನಗೆ ಈ ರಾಜ್ಯಲಕ್ಷ್ಮಿಯು ಇನ್ನು ಬೇಕಾಗಿಲ್ಲ. ನನ್ನ ಪ್ರಿಯ ತಮ್ಮಂದಿರನ್ನು ಬಹಳ ಹೊತ್ತು ಅಗಲಿ ಇರಲಾರೆನು. ಇದಲ್ಲದೆ ಒಬ್ಬ ತಮ್ಮನು ಮರಣಹೊಂದಿದರೆ ನಾನು ಪ್ರಾಣತ್ಯಾಗ ಮಾಡತಕ್ಕದ್ದೆಂದು ನನ್ನ ನಿಶ್ಚಯವುಂಟು. ಆದಕಾರಣ ಎಲೈ ಪಾಂಚಾಲಿಯೇ ನಾವಿಬ್ಬರೂ ನಮ್ಮ ದೇಹಗಳನ್ನು ಅಗ್ನಿ ನಾರಾಯಣನಿಗೆ ಆಹುತಿಕೊಟ್ಟು ಅವರ ಭೆಟ್ಟಿಗೆ ಹೋಗೋಣ ನಡೆ. ಎಂದು ಅಂದನು. ಈ ಮಾತುಗಳನ್ನು ಕೇಳಿ ಆ ಕಪಟಿಯಾದ ಬ್ರಾಹ್ಮಣನು ತನ್ನ ಮನೋರಥವು ಕೈಗೂಡಿತೆಂಮ ಮನಸಿನಲ್ಲಿಯೇ ಸಂತೋಷಬಡುತ್ತ ಹೋಗಿ ಬರುತ್ತೇನೆಂದು ಹೇಳಿ ಅಲ್ಲಿಂದ ಹೊರಟು ಹೋದನು.

---

## ೧೦ನೆಯ ಪ್ರಕರಣ.

### ಭ್ರಾಂತಿಯು.

ಆ ಒಳಿಕ ಧರ್ಮರಾಜನು ಸೇವಕರಿಗೆ ಚಿತೆಯನ್ನು ಸಿದ್ಧಮಾಡಲಿಕ್ಕೆ ಆಜ್ಞಾಪಿಸಿದನು. ಅಗ್ನಿಯು ಸಿದ್ಧವಾಗಿ ನಾಲ್ಕೂ ದಿಕ್ಕಿಗೆ ಕುಡಿಗಳನ್ನು ಚಾಚಿ ಭಯಂಕರವಾಗಿ ಉರಿಯಹತ್ತಿತು. ಆ ಇಬ್ಬರು ಸ್ತ್ರೀ ಪುರುಷರು ಅದರಲ್ಲಿ ಹಾರಲಿಕ್ಕೆ ಸಿದ್ಧರಾದರು. ಧರ್ಮರಾಜನು ಒಬ್ಬ ಸೇವಕನನ್ನು ಕರೆದು–ಮಾತೆಯಾದ ಕುಂತೀದೇವಿಗೆ– ತಾಯಿಯೇ,

ಯಾವನು ನಮ್ಮೆಲ್ಲರನ್ನು ಲಾಕ್ಷಾಗ್ರುಹದೊಳಗಿಂದ ಪಾರುಮಾಡಿದನೋ, ಯಾವನು ಕಿರ್ಮೀರ ಬಕ ಹಿಡಿಂಬ ಮೊದಲಾದ ಕ್ರೂರ ರಾಕ್ಷಸರನ್ನು ತನ್ನ ಬಾಹುಬಲದಿಂದ ನಾಶಮಾಡಿದನೋ ಆ ಬಲಿಷ್ಠನಾದ ಭೀಮಸೇನನು ನಮ್ಮ ದುರ್ದೈವದಿಂದ ಇಂದು ಪರಲೋಕಕ್ಕೆ ತೆರಳಿದನು. ಈ ದುಃಖಕರವಾದ ಸಂಗತಿಯನ್ನು ನಿನಗೆ ತಿಳಿಸುವದು ನನ್ನ ಪಾಲಿಗೆ ಬಂದದ್ದಕ್ಕಾಗಿ ನನಗೆ ಬಹಳ ದುಃಖವಾಗುತ್ತದೆ. ಎಂದು ಹೇಳಿ ಕಳಿಸಿದನು. ತರುವಾಯ ಅವನು ತನ್ನ ಆಜ್ಞಾಧಾರಕ ತಮ್ಮನಾದ ಸಹದೇವನಿಗೆ–ತಮ್ಮಾ, ನೀನು ನಮ್ಮ ಕುಲದಲ್ಲಿ ಬ್ರಹಸ್ಪತಿಯಂತೆ ಬುದ್ಧಿವಂತನಿರುವೆ. ನೀನು ವಯಸ್ಸಿನಿಂದ ಚಿಕ್ಕವನಾದಾಗ್ಯೂ; ಜ್ಞಾನದಿಂದ ನನಗಿಂತ ಚಿಕ್ಕವನಲ್ಲ ನಾನು ಭೀಮಾರ್ಜುನರ ಭೆಟ್ಟಿಗೆ ಪರಲೋಕಕ್ಕೆ ಹೋದೆನೆಂದು ಶೋಕ ಮಾಡಬೇಡ. ವಿವೇಕದಿಂದ ನಡೆದು ನಮಗೂ ನಮ್ಮ ಪಿತೃಗಳಿಗೂ ತರ್ಪಣೋದಕವನ್ನು ಕೊಡುವದಕ್ಕೆ ಬಹು ದಿವಸಗಳ ವರೆಗೆ ಬದುಕಿರು. ನಕುಲನು ನಮ್ಮಂತೆ ಅಭಿಮಾನಿಯಾಗಿರುವನು. ಅವನ ಮನಸ್ಸನ್ನು ನೋಯಿಸದೆ ಉಭಯತರೂ ಒಮ್ಮನಸಿನಿಂದ ನಡೆಯುತ್ತ ಇರಿ. ಎಂದು ಹೇಳಿ ಕಳಿಸಿದನು. ಇದೇ ಮೇರೆಗೆ ದ್ರೌಪದಿಯು ತನ್ನ ದಾಸಿಯ ಕೂಡ ಸವತಿಯಾದ ಸುಭದ್ರಾದೇವಿಗೆ— ಪ್ರಿಯ ಸುಭದ್ರಾದೇವಿಯೇ, ಅಭಿಮನ್ಯುವಿನ ಹೆಂಡತಿಯಾದ ಉತ್ತರೆಯು ನಾಲ್ಕು ತಿಂಗಳು ಗರ್ಭವತಿಯಿರುವಳು. ಅವಳನ್ನು ಚನ್ನಾಗಿ ಜೋಕೆ ಮಾಡು. ಯಾಕಂದರೆ ಆ ಗರ್ಭವೇ ನಮ್ಮ ವಂಶಾಂಕುರವು. ಈಶ್ವರ ಕೃಪೆಯಿಂದ ಅದು ಉದಯಕ್ಕೆ ಬಂದರೆ ಅದೇ ನಮಗೆ ಮುಂದೆ ಪಿಂಡೋದಕವನ್ನು ಕೊಡಬಹುದು ಎಂದು ಹೇಳಿ ಕಳಿಸಿದಳು.

ಈ ಮೇರೆಗೆ ಧರ್ಮರಾಜನೂ ದ್ರೌಪದಿಯೂ ಚಿತಾರೋಹಣಮಾಡಲಿಕ್ಕೆ ಸಿದ್ಧರಾದದ್ದನ್ನು ಕಂಡು ಯಾವತ್ತೂ ಸೇವಕರು ಕಣ್ಣೀರು ಸುರಿಸಹತ್ತಿದರು. ಮತ್ತು ಅವರ ಸಂರಕ್ಷಣೆಯ ಸಲುವಾಗಿ ಲೋಕಪಾಲರನ್ನು ಮರೆಹೊಕ್ಕು ಅನನ್ಯಭಾವದಿಂದ ಸ್ತೋತ್ರ ಮಾಡಹತ್ತಿದರು ಧರ್ಮರಾಜನು ಅವರನ್ನು ಸಂತೈಸಿ, ನೀರು ತರಹೇಳಿದನು. ಆ ಬಳಿಕ ಅವನು ಹಸ್ತ,ಪಾದ, ಪ್ರಕ್ಷಾಲನವನ್ನು ಮಾಡಿಕೊಂಡು ಆಚಮನ ನೇತ್ರಸ್ಪರ್ಶಗಳನ್ನು ಮಾಡಿಕೊಂಡು, ಲೋಕರೂಢಿಗನುಸಾರವಾಗಿ ಗುರು ಭೀಷ್ಮಾಚಾರ್ಯನಿಗೂ, ಪಿತಾಮಹ ವಿಚಿತ್ರವೀರ್ಯನಿಗೂ, ಪ್ರಪಿತಾಮಹ ಶಂತನುರಾಯನಿಗೂ ತಿಲಾಂಜಲಿಯನ್ನು ಕೊಟ್ಟನು. ಕಟ್ಟಕಡೆಗೆ ಒಳ್ಳೇದುಃಖದಿಂದ ಕಣ್ಣೀರು ತುಂಬು, ಪೂಜ್ಯಪಿತ ಪಂಡುರಾಜನನ್ನು ನೆನಿಸಿ ಅವರ ಹೆಸರಿನಿಂದ ನೀರು ಬಿಟ್ಟನು. ಆ ಬಳಿಕ ಭೀಮಸೇನನ ಬಾಲಲೀಲೆಗಳನ್ನು ನೆನಿಸಿ ಅವನ ಹೆಸರಿನಿಂದಲೂ ನೀರು ಬಿಟ್ಟನು. ದ್ರೌಪದಿಯೂ ಭೀಮಸೇನನನ್ನು ನೆನಸಿ- ಪ್ರಾಣನಾಥರೇ, ಈ ದಾಸಿಯು ಕೊಡುವ ನೀರು ನಿಮಗೆ ಪರಲೋಕದಲ್ಲಿ ಕಾಲುತೊಳೆಯಲಿಕ್ಕೆ ಉಪಯೋಗವಾಗಲಿ ಎಂದು ನೀರು ಬಿಟ್ಟಳು. ಈ ಹೃದಯದ್ರಾವಕ ಸ್ಥಿತಿಯನ್ನು ಕಂಡು ಪರಿಜನರಿಗೆ ಬಹಳ ದುಃಖವಾಯಿತು. ಅಷ್ಟರಲ್ಲಿ ಧರ್ಮರಾಜನ ಬಲಗಣ್ಣು ಹಾರಹತ್ತಿತು. ಅದರಿಂದ ಅವನು ಪರಲೋಕದಲ್ಲಿ ಭೀಮನ ದರ್ಶನವು ಬಹು ಬೇಗ ಆಗು

ವದೆಂದು ಸಮಾಧಾನಪಟ್ಟನು. ಆ ಬಳಿಕ ಅವನು ದ್ರೌಪದಿಯ ಕೈಹಿಡಿದು ಧಗಧ್ಧಗಿಸಿ ಉರಿಯುವ ಬೆಂಕಿಯ ಬಳಿಗೆ ಹೋಗಿ ಅದಕ್ಕೆ ಮೂರು ಸಾರೆ ಪ್ರದಕ್ಷಿಣೆಯನ್ನು ಹಾಕಿ ಶ್ರೀ ಕೃಷ್ಣ ನಾಮಸ್ಮರಣೆಯನ್ನು ಮಾಡುತ್ತ ಅದರಲ್ಲಿ ಹಾರಲಿಕ್ಕೆ ಸಿದ್ಧನಾಗಿ ನಿಂತನು.

ಇತ್ತ ಸರೋವರದ ದಂಡೆಯಮೇಲೆ ಭೀಮ ದುರ್ಯೋಧನರ ಗದಾಯುದ್ಧವು ಒಳ್ಳೇ ಸಂಭ್ರಮದಿಂದ ನಡೆದಿತ್ತು. ಒಬ್ಬರು ಮತ್ತೊಬ್ಬರ ಮೇಲೆ ಭಯಂಕರವಾಗಿ ಗದಾಪ್ರಹಾರವನ್ನು ಮಾಡುತ್ತಿದ್ದರು. ಕಟ್ಟಕಡೆಗೆ ಭೀಮಸೇನನು ದುರ್ಯೋಧನನ ತೊಡೆಯ ಮೇಲೆ ಒಂದು ಗದೆಯ ಪೆಟ್ಟು ಹಾಕಲು ದುರ್ಯೋಧನನು ನೆಲಕ್ಕೆ ಬಿದ್ದು ಪ್ರಾಣ ಬಿಟ್ಟನು. ಆ ಕಾಲಕ್ಕೆ ಭೀಮಸೇನನ ಸರ್ವಾಂಗವು ರಕ್ತಮಯವಾಗಿತ್ತು. ಮುಖ ಮುದ್ರೆಯು ಒಳ್ಳೇ ಭಯಂಕರವಾಗಿ ಕಾಣುತ್ತಿತ್ತು. ಅದೇ ಸ್ವರೂಪದಿಂದ ಅವನು ದ್ರೌಪದಿಯ ಹೆಳಲು ಹಾಕುವ ತನ್ನ ಪ್ರತಿಜ್ಞೆಯನ್ನು ಕೊನೆಗಾಣಿಸುವ ನಿಮಿತ್ತದಿಂದ ಅವಳನ್ನು ಶೋಧಿಸುತ್ತ ಬಹು ವೇಗದಿಂದ ಬರುತ್ತಿದ್ದನು. ಜನರು ಇವನನ್ನು ಕಂಡು ಹೆದರಿ ಗದ್ದಲವನ್ನು ಎಬ್ಬಿಸಿದರು. ಧರ್ಮರಾಜನು ಅವನ ಭಯಂಕರವಾದ ಸ್ವರೂಪವನ್ನು ದೂರದಿಂದಲೇ ನೋಡಿ ಭೀಮನ ಮರಣವಾರ್ತೆಯನ್ನು ಮೊದಲೇ ಕೇಳಿದ್ದನಾದ್ದರಿಂದ ಈಗ ಪಾಂಚಾಲಿಯ ಶೋಧ ಮಾಡುತ್ತ ಬರುವವನು ದುರ್ಯೋಧನನೇ ಎಂತಲೂ, ಅವನು ಗದಾಯುದ್ಧದಲ್ಲಿ ಅರ್ಜುನನನ್ನು ಕೊಂದು ಬಂದಿರುವನೆಂತಲೂ ತಿಳಕೊಂಡನು. ಅಷ್ಟರಲ್ಲಿ ದುರ್ಯೋಧನನೆಂಬಂತೆ ಭ್ರಾಂತಿಯನ್ನು ಹುಟ್ಟಿಸುವ ಭೀಮಸೇನನು— ಎಲೈ ವೀರಾಗ್ರಣಿಗಳೇ ನನ್ನನ್ನು ಕಂಡು ಹೆದರಬೇಡಿರಿ. ನನ್ನಿಂದ ಯಾರಿಗೂ ಉಪದ್ರವವಾಗಲಿಕ್ಕಿಲ್ಲ. ಆದರೆ ಯಾವಳನ್ನು ದುಃಶಾಸನನು ನೆರೆದ ಸಭೆಯಲ್ಲಿ ತುರುಬು ಹಿಡಿದು ತಂದನೋ, ಯಾವಳನ್ನು ನಗ್ನ ಮಾಡುವದಕ್ಕಾಗಿ ಅವಳ ವಸ್ತ್ರಗಳನ್ನು ಕಳೆಕಳೆದು ಒಗೆದನೋ, ಮತ್ತು ಯಾವಳಿಗೆ ತನ್ನ ದಾಸಿಯಾಗಿ ತೊಡೆಯ ಮೇಲೆ ಕೂಡಬೇಕೆಂದು ದುರ್ಯೋಧನನು ಅಂದನೋ ಆ ಪಾಂಚಾಲ ಕನ್ನಿಕೆಯಾದ ದ್ರೌಪದಿಯು ಸದ್ಯಕ್ಕೆ ಎಲ್ಲಿರುವಳು? ತೋರಿಸಿರಿ. ಎಂದು ಒದರುತ್ತ ತೀರ ಸಮೀಪಕ್ಕೆ ಬಂದನು. ಈ ನೀಚನಾದ ದುರ್ಯೋಧನನು ಈ ಅನಾಥ ಅಬಲೆಯನ್ನು ನಿಷ್ಕಾರಣವಾಗಿ ಪೀಡಿಸುವನೆಂದು ತಿಳಿದು ಧರ್ಮರಾಜನು ದುಃಖವನ್ನು ಮರೆತು ಬಿಟ್ಟನು. ಅವನ ಕ್ಷಾತ್ರತೇಜವು ಜಾಗ್ರತವಾಯಿತು. ಮತ್ತು ದ್ರೌಪದಿಯನ್ನು ಕುರಿತು ಪ್ರಿಯೆ ಗಾಬರಿಯಾಗಬೇಡ. ಕ್ಷಣಮಾತ್ರದಲ್ಲಿ ಈ ದುಷ್ಟನನ್ನು ಯಮಸದನಕ್ಕೆ ಅಟ್ಟುವೆನು. ಎಲಾ ಯಾರಲ್ಲಿ? ನನ್ನ ಧನುಷ್ಯ ಬಾಣಗಳನ್ನು ತನ್ನಿರಿ. ಎಂದು ಸೇವಕರಿಗೆ ಆಜ್ಞಾಪಿಸಿದನು. ಅವರು ಬೇಗ ಬಾರದ್ದರಿಂದ ಅವನನ್ನು ಕಿಚ್ಚಿನಲ್ಲಿ ನೂಕುವ ನಿಶ್ಚಯ ಮಾಡಿದನು. ಇತ್ತ ಅಗ್ನಿಪ್ರವೇಶ ಮಾಡಲಿಕ್ಕೆ ಸಿದ್ಧಳಾದ ದ್ರೌಪದಿಯನ್ನು ಕಂಡು ಜಯಂಧರನೆಂಬ ವಿಶ್ವಾಸದ ಸೇವಕನು ತಾಯೀ ದ್ರೌಪದೀ ನಿನ್ನ ದುಃಖವು ನೀಗುವ ಆಶೆಯು ಇನ್ನು ಉಳಿಯಲಿಲ್ಲ. ದುಃಶಾಸನನು ಜಗ್ಗಿದ್ದರಿಂದ ಬಿಚ್ಚಿದ ಈ ನಿನ್ನ ಕೇಶಪಾಶವು ಆಗಾಗ್ಗೆ ನಿನ್ನ ಕಣ್ಣ ಮುಂದೆ ಬರುತ್ತಿರುವದು. ಅದನ್ನು

ಕೈಯಿಂದ ತುಸು ಓರೆಮಾಡಿಕೊಂಡು ಆ ಬಳಿಕ ಅಗ್ನಿ ಪ್ರವೇಶವನ್ನು ಮಾಡು. ಎಂದು ಅಂದನು. ಅದಕ್ಕೆ ಧರ್ಮರಾಯನು—ಪಾಂಚಾಲಿ, ತುಸು ತಡೆ ಗಡಿಬಿಡಿ ಮಾಡಬೇಡ. ಈ ನೀಚನು ಸಾಯದ ಹೊರತು ಕೇಶಪಾಶಗಳನ್ನು ಕಟ್ಟಬಾರದು ಎಂದು ಒದರಿ ಹೇಳಿದನು. ಆಗ ಭೀಮಸೇನನೂ ಒದರಿ—ಪ್ರಿಯೇ, ದ್ರೌಪದಿ ಇದೇನು? ನಾನು ಜೀವದಿಂದ ಇರಲು ನೀನು ನಿನ್ನ ಕೈಯಿಂದ ಹೆಳಲು ಹಾಕಿಕೊಳ್ಳುವಿಯಾ? ತುಸು ತಾಳು; ದುಷ್ಟನಾದ ದುಃಶಾಸನನ ರಕ್ತದಿಂದ ತುಂಬಿದ ಈ ಕೈಗಳಿಂದ ನಿನ್ನ ಹೆಳಲನ್ನು ನಾನೇ ಹಾಕುವೆನು ಎಂದು ಅಂದನು.

ಭೀಮಸೇನನ ಈ ಶಬ್ದಗಳು ಕಿವಿಗೆ ಬಿದ್ದಕೂಡಲೆ ದ್ರೌಪದಿಯು ಗೊಂದಲದಲ್ಲಿ ಬಿದ್ದು ನೋಡಹತ್ತಿದಳು. ಅವಳಿಗೆ ತಾನು ಕನಸಿನಲ್ಲಿರುವೆನೋ ಎಚ್ಚರಿಕೆಯಲ್ಲಿರುವೆನೋ ತಿಳಿಯದಂತಾಯಿತು. ಅಷ್ಟರಲ್ಲಿ ಭೀಮಸೇನನು ಎಲೈ ಅಂಜುಬುರಿಕೆಯೇ ಎಲ್ಲಿಗೆ ಹೋಗುವೆ? ಇಲ್ಲಿ ಬಾ, ಎಂದು ಅವಳ ಕೇಶಪಾಶಗಳನ್ನು ಹಿಡಿಯಹೋದನು. ಅದನ್ನು ಕಂಡು ಧರ್ಮರಾಯನು ಸಿಟ್ಟಿನಿಂದ ಅವನ ಟೊಂಕಕ್ಕೆ ಅಪ್ಪವಿಟ್ಟು ಹಾಕಿ ನೀಚಾ ದುರ್ಯೋಧನಾ, ಹಿಂದೆ ಮಾಡಿದ ಪಾಪವು ಸಾಕಗಲಿಲ್ಲವೆ? ಎಂದು ಒಳ್ಳೇ ಆವೇಶದಿಂದ ಅವನನ್ನು ಬೆಂಕಿಯಲ್ಲಿ ನೂಕಹೋದನು ಅದನ್ನು ಕಂಡು ಭೀಮಸೇನನು— ಅಣ್ಣಾ ಇದೇನು ನಾನು ದುರ್ಯೋಧನನಲ್ಲ, ನಿಮ್ಮ ಅಜ್ಞಾಧಾರಕ ತಮ್ಮನಾದ ಭೀಮನು. ನನ್ನನ್ನು ಬಿಡಿರಿ; ಎಂದು ಅಂದನು. ಧರ್ಮರಾಯನಿಗೆ ಬಹಳ ಆಶ್ಚರ್ಯವಾಯಿತು. ಅವನು ನೆಟ್ಟಗೆ ನಿರೀಕ್ಷಿಸಿ ನಿಜವಾಗಿ ಇವನು ಭೀಮಸೇನನೇ ಎಂದು ಮನಸ್ಸಿನಲ್ಲಿ ನಿಶ್ಚಯಿಸಿದನು. ಆಗ ಅವನಿಗೆ ಆದ ಆನಂದವನ್ನು ವರ್ಣಿಸುವದು ಅಶಕ್ಯವು. ಆಗ ಅವನು ಭೀಮಸೇನನನ್ನು ಬಿಗಿಯಾಗಿ ಅಪ್ಪಿಕೊಂಡು ಮುದ್ದಾಡಿದನು. ಮತ್ತು ಅರ್ಜುನನು ಸುಖವಾಗಿರುವನೆ? ಎಂದು ಕೇಳಲು, ಭೀಮಸೇನನು ಎಲ್ಲ ಸಂಗತಿಗಳನ್ನು ವಿವರಿಸಿ ಹೇಳಿದನು. ಅದರಿಂದಂತೂ ಅವನ ಆನಂದಕ್ಕೆ ಪಾರವಿಲ್ಲದಂತಾಯಿತು. ಅಷ್ಟರಲ್ಲಿ ಶ್ರೀಕೃಷ್ಣನು ಅರ್ಜುನನೊಡನೆ ಧರ್ಮರಾಯನ ಭೆಟ್ಟಿಗೆ ಬಂದನು. ಸಾಂಪ್ರದಾಯದಂತೆ ಆದರೋಪಚಾರಗಳೂ ಕುಶಲಪ್ರಶ್ನೆಗಳೂ ಆದವು. ಎಲ್ಲರೂ ಆನಂದ ಸಾಗರದಲ್ಲಿ ಮುಳುಗಿದರು. ಚಾರ್ವಾಕನೆಂಬ ರಾಕ್ಷಸನು ಹೀಗೆ ಭ್ರಾಂತಿಯನ್ನುಂಟು ಮಾಡಿದನೆಂದು ತಿಳಿಯಲು, ಶ್ರೀಕೃಷ್ಣನು ಅವನನ್ನು ನಕುಲನಿಂದ ಹಿಡಿತರಿಸಿ ಕೊಲ್ಲಿಸಿದನು.

# ೧೧ನೆಯ ಪ್ರಕರಣ.

## ವೇಣೀಬಂಧನ

ಹಿಂದಿನ ಪ್ರಕರಣದಲ್ಲಿ ವರ್ಣಿಸಿದಂತೆ ಧರ್ಮರಾಜನ ಭ್ರಾಂತಿಯು ದೂರವಾಯಿತು. ಎತ್ತ ನೋಡಿದತ್ತ ಆನಂದವು ಮೊಳೆದೋರಿತು. ಆಗ ಭೀಮಸೇನನು ಧರ್ಮರಾಜನನ್ನು ಕುರಿತು ಅಣ್ಣಾ, ಇನ್ನೊಂದು ದೊಡ್ಡ ಕಾರ್ಯವು ಉಳಿದದೆ. ಅದನ್ನಷ್ಟು ತೀರಿಸಲಿಕ್ಕೆ ಬೇಗನೆ ಅಪ್ಪಣೆಯನ್ನು ದಯಪಾಲಿಸಬೇಕು ಎಂದು ಬಿನ್ನವಿಸಿದನು. ಧರ್ಮರಾಜನು ಅಂಥಾ ಮಹತ್ಕಾರ್ಯವು ಯಾವದು? ಎಂದು ಕೇಳಲು, ಭೀಮಸೇನನು ದುರ್ಯೋಧನ ದುಃಶಾಸನರ ರಕ್ತದಲ್ಲಿ ಮುಳುಗಿದ ಈ ನನ್ನ ಕೈಗಳಿಂದ ದುಃಶಾಸನನು ಜಗ್ಗುವದರಿಂದ ಬಿಚ್ಚಿದ ಪಾಂಚಾಲಿಯ ಕೂದಲುಗಳನ್ನು ಒಟ್ಟುಗೂಡಿಸಿ ಹೆಳಲು ಹಾಕುವದು ನನ್ನ ಪ್ರತಿಜ್ಞೆಯು ಕಡೆಯ ಭಾಗವಲ್ಲವೆ? ಎಲೈ ಪಾಂಚಾಲಿಯೇ ಇತ್ತಬಾ. ನಿನಗೆ ಅವಮಾನವನ್ನು ಮಾಡಿದ್ದರಿಂದ ನನ್ನ ಮೈಯೆಲ್ಲ ಸಿಟ್ಟಿನಿಂದ ಸಂತಪ್ತವಾಯಿತು. ಅದನ್ನು ಶಾಂತಗೊಳಿಸುವದಕ್ಕಾಗಿಯೇ ಆ ನೀಚರ ರಕ್ತವನ್ನು ನನ್ನ ಕೈಗೆಲ್ಲ ತೊಡಕೊಂಡಿದ್ದೇನೆ. ನೀನು ನನ್ನ ಕೈಗಳನ್ನು ಸ್ಪರ್ಶಮಾಡು. ಬಹುದಿವಸದಿಂದ ಹೆಳಲು ಹಾಕದೆ ಬಿಟ್ಟ ನಿನ್ನ ಕೇಶಪಾಶಗಳನ್ನು ಒಟ್ಟುಗೂಡಿಸಿಕೊಂಡು ಹೆಳಲು ಹಾಕಿಕೊ. ಎಂದು ಹೇಳಿದನು. ಆಗ ಅವಳ ದಾಸಿಯು ಹೆಳಲು ಹಾಕಿದಳು. ಆ ಸಮಯದಲ್ಲಿ ಕೆಳಗೆ ಕೊಟ್ಟಂತೆ ಅಶರೀರ ವಾಣಿಯಾಯಿತು. "ಎಲೈ ಕುರುಪಾಂಡವ ಸೈನ್ಯದೊಳಗೆ ಉಳಿದ ವೀರರೇ ಕೇಳಿರಿ. ದ್ರೌಪದಿಯು ಅಸ್ತವ್ಯಸ್ತವಾದ ಯಾವ ಕೇಶಪಾಶಗಳನ್ನು ಕಂಡು, ಕ್ರೋಧಾಂಧರೂ ಅತುಲ ಪರಾಕ್ರಮ ಶಾಲಿಗಳೂ ಆದ ಪಾಂಡವರು ಎಲ್ಲ ಕೌರವರ ಹಾಗು ಎಷ್ಟೋ ವೀರರಾದ ಅರಸರ ಹೆಂಡಂದಿರ ಕೇಶಪಾಶಗಳನ್ನು ಬಿಚ್ಚಿಸಿದರೋ ಕೌರವಕುಲಕ್ಕೆ ಧೂಮಕೇತುವಿನಂತೆ ಇರುವ ಆ ಕೇಶಪಾಶವು ಈಗ ಕಟ್ಟಲ್ಪಟ್ಟಿತು. ಆದಕಾರಣ ಇನ್ನು ಮುಂದೆ ಪ್ರಜೆಗಳ ಸಂಹಾರವು ನಿಲ್ಲಲಿ; ರಾಜಕುಲಗಳು ಸ್ವಸ್ಥತೆಯನ್ನು ಹೊಂದಲಿ.

ಆಗ ಧರ್ಮರಾಜನು ದೇವಿ, ಆಕಾಶದಲ್ಲಿ ತಿರುಗಾಡುವ-ಸಿದ್ಧ, ಸುರ, ಕಿನ್ನರರು ನಿನ್ನ ವೇಣೀಬಂಧನ ಮಹೋತ್ಸವವನ್ನು ಹೊಗಳುತ್ತಿರುವರು ನೋಡು ಎಂದು ಅಂದನು. ತರುವಾಯ ಧರ್ಮರಾಜನಿಗೆ ರಾಜ್ಯಾಭಿಷೇಕವನ್ನು ಮಾಡುವದಕ್ಕಾಗಿ ಶ್ರೀವ್ಯಾಸ ವಾಲ್ಮೀಕಿ ಮೊದಲಾದ ಮಹರ್ಷಿಗಳೂ ನೆರೆದರು. ಯಾದವ ಮತ್ಸ್ಯ ಮಾಗಧ ಇತ್ಯಾದಿ ಕುಲದ ರಾಜಕುಮಾರರು ಹೆಗಲಮೇಲೆ ತೀರ್ಥೋದಕಗಳಿಂದ ತುಂಬಿದ ಸುವರ್ಣ ಕಲಶಗಳನ್ನು ತಕ್ಕೊಂಡುಬಂದರು. ಅವರು ಯಥಾವಿಧಿಯಾಗಿ ಧರ್ಮರಾಯನಿಗೆ ಮಂಗಲಾಭಿಷೇಕವನ್ನು ಮಾಡಿದರು. ಈ ಎರಡು ಮಹೋತ್ಸವಗಳನ್ನು

ಕಂಡು ಎಲ್ಲರಿಗೂ ಬಹಳ ಆನಂದವಾಯಿತು. ಆಕಾಲಕ್ಕೆ ಶ್ರೀಕೃಷ್ಣನು ಧರ್ಮರಾಜನನ್ನು ಕುರಿತು, ರಾಜಾ, ನಿನಗೆ ಮತ್ತೇನು ಇಚ್ಛೆ, ಅದೆ ಹೇಳು. ಅನ್ನಲು ಪುಂಡರೀಕಾಕ್ಷಾ, ನೀನು ಪ್ರಸನ್ನನಾಗಿರಲು ಯಾವ ವಸ್ತುವೂ ದುರ್ಲಭವಿಲ್ಲ. ಹೇ ಭಗವಂತಾ, ವಾಸುದೇವಾ. ನೀನು ಯಾವಾಗಲೂ ನಮ್ಮ ಬೆನ್ನಮೇಲೆ ಇರುವೆಯಾದ ಕಾರಣ ನಮಗೆ ಯಾತರ ಕೊರತೆಯಾಗುವದು? ಜಗತ್ತಿನ ಉತ್ಪತ್ತಿ ಸ್ಥಿತಿಲಯಗಳಿಗೆ ಕಾರಣೀಭೂತನಾದ ನೀನು ಜಗದಾತ್ಮನಾಗಿ ಸಗುಣರೂಪದಿಂದ ಈ ವಿಶ್ವದಲ್ಲಿ ಅವತಾರವನ್ನು ತಾಳಿ ಭಕ್ತರ ಸಂರಕ್ಷಣವನ್ನು ಮಾಡುತ್ತಿರುವೆ ನಿನ್ನ ಚಿಂತನ ಮಾತ್ರದಿಂದಲೇ ತ್ರಿವಿಧ ತಾಪಗಳಿಂದ ಮುಕ್ತಿಯಾಗುವದು. ಅವರೆ ಸಾಕ್ಷಾತ್ ದರ್ಶನವಾದ ಮೇಲೆ ದುಃಖಗಳ ಮಾತೇಕೆ? ಎಂಥ ದೊಡ್ಡ ದೊಡ್ಡ ಸಂಕಟಗಳು ಒದಗಿದಾಗ್ಯೂ ಸಕಲ ಶತ್ರುಗಳನ್ನು ಸಂಹರಿಸಿ, ನಮ್ಮ ಸಂರಕ್ಷಣವನ್ನು ಮಾಡಿದೆ. ಮತ್ತು ಪಾಂಚಾಲಿಯನ್ನು ದುಃಖಸಾಗರದಿಂದ ದಾಟಿಸಿದೆ. ಇದಕ್ಕೂ ಹೆಚ್ಚಿಗೆ ನಿನ್ನ ಬಳಿಗೆ ನಾನೇನು ಬೇಡತಕ್ಕದ್ದಿದೆ.

ಸಮಾಪ್ತಿ.

**Printed by Y. B. Jathar at the Karnatak Printing Works, Dharwar.**

**ಹೊಸ ಪುಸ್ತಕ !** **ಹೊಸ ಪುಸ್ತಕ !!**

“ ಮುರಾರರಾವ ” ಅಥವಾ “ ಗುಪ್ತಪೋಲೀಸರ ಚಾತುರ್ಯ ” ಎಂಬ ಸುರಸವಾದ ೬೧೧ ಪುಟಗಳ ಕಾದಂಬರಿಯು ಅಚ್ಚಾಗಿ ಮಾರಾಟಕ್ಕೆ ಸಿದ್ಧವಾಗಿರುವದು.

ಬೆಲೆ— ೮ ಆಣೆ.

ಪುಸ್ತಕ ಸಿಗುವ ಸ್ಥಳ—

ಬಾ. ಕೃ. ಹಳಪೇಟೆ, ಕಾರ್ಯದರ್ಶಿ
ಕರ್ಣಾಟಕ ವಾಙ್ಮಯಸೇವಾಸಂಘ, ಧಾರವಾಡ.

N. T. Aminbhavi,
ಮಾಳಮಡ್ಡಿ ಧಾರವಾಡ.